ಬಾಲ ಬಳಗ

# ಚಿಗುರು ಚಿಲುಮೆ

November 15 2014
Volume 01 Issue 04



प्रिय ಓದುಗರೇ,

ಎಲ್ಲರಿಗೂ ನಮಸ್ಕಾರ. ಬಾಲಬಳಗ ಬಾಲರ ಬಳಗ ಅಷ್ಟೇ ಅಲ್ಲದೇ ಪಾಲಕರ ಮತ್ತು ಶಿಕ್ಷಕರ ಬೆಳವಣಿಗೆಯಲ್ಲಿ ಸದಾ ತನ್ನನ್ನು ತಾನು ತೊಡಗಿಸಿಕೊಂಡಿದೆ ಮತ್ತು ಅವರನ್ನು ಪ್ರೋತ್ಸಾಹಿಸುತ್ತಿದೆ. ಈ ದಿಶೆಯಲ್ಲಿ ಪ್ರಾರಂಭವಾದದ್ದೇ ನಮ್ಮ ನಿಮ್ಮೆಲ್ಲರ ಚಿಗುರುಚಿಲುಮೆ . ಈ ಬಾರಿ ಚಿಗುರುಚಿಲುಮೆಯ ನಾಲ್ಕನೇಯ ಆವೃತ್ತಿಯನ್ನು ನಿಮ್ಮೆಲ್ಲರಿಗೂ ತಲುಪಿಸಿದ ಖುಷಿ ನಮಗಿದೆ.

ಕಳೆದ ಸಂಚಿಕೆಯಲ್ಲಿ ಗುರುಪರಿಕಲ್ಪನೆಗೆ ಸಂಬಂಧಿಸಿದಂತೆ ಲೇಖನಗಳನ್ನು ಪ್ರಕಟಿಸಲಾಗಿತ್ತು. ಮುಖ್ಯವಾಗಿ ಕೆಲವು ಆಸಕ್ತ ವಿಷಯಗಳಿಗೆ ಗುರುಗಳ ಪರಿಚಯ ಮಾಡಿದ್ದೇವೆ. ಇದರ ಮೂಲಕ ಮುಂದೆ ಪರಿಚಯವಾಗುವ ಹಲವಾರು ಕಲೆಗಳ ಒಂದು ಚಿತ್ರಣ ನಿಮ್ಮುಂದಿಡಲು ಪ್ರಯತ್ನಿಸುತ್ತಿದೆ, ಚಿಗುರುಚಿಲುಮೆ .ಈ ಹೊಸ ವಿಚಾರವನ್ನು ಸದುಪಯೋಗ ಮಾಡಿಕೊಂಡರೆ ಎಲ್ಲರಿಗೂ ಬೆಳೆಯಲು ಒಳ್ಳೆಯ ಅವಕಾಶವಿದೆ ಎನ್ನುವುದು ಬಳಗದ ಉದ್ದೇಶ.

ಮೊದಲು ಶಾಲೆಯಲ್ಲಿ ನನ್ನದು ವಿದ್ಯಾರ್ಥಿನಿಯ ಪಾತ್ರ ಆದರೆ ಈಗ ಚಿಗುರುಚಿಲುಮೆ ಬಳಗದಿಂದ ಶಾಲೆಗೆ ಹೋದ ಅನುಭವವೇ ಬೇರೆ. ಮಕ್ಕಳ, ಶಿಕ್ಷಕರ ಉತ್ಸಾಹ ಮೆಚ್ಚುವಂತಹದ್ದು. ಅಕ್ಕಾ, ನಾ ಈ ಕಥೆ ಬರದೇನಿ, ಇಷ್ಟು ಗೆಳೆಯ ಗೆಳತಿಯರ email-id collect ಮಾಡೇನಿ ಅನ್ನುತ್ತಾ ಅವರವರಿಗೆ ನೀಡಿದ ಜವಾಬ್ದಾರಿಯನ್ನು ಸಂತೋಷದಿಂದ ನಿಭಾಯಿಸುವುದನ್ನು ನೋಡಿ ನಮ್ಮ ಬಳಗಕ್ಕೆ ಪ್ರೇರಣೆ ಸಿಕ್ಕಂತಾಗಿದೆ ಹಾಗೂ ಕಲಿಕೆಗೆ ಮಾರ್ಗವಾಗಿದೆ. ಇದರ ಜೊತೆಗೆ ಚಿಗುರುಚಿಲುಮೆ ತರಗತಿಯನ್ನು ಪ್ರಾರಂಭಿಸಿ ಮಕ್ಕಳ ಜೊತೆ ನಮ್ಮ ಒಡನಾಟ ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ. ಈ ತರಗತಿಯಲ್ಲಿ ಮುಕ್ತ ಸಂವಾದಕ್ಕೆ ಹೆಚ್ಚು ಪ್ರಾಮುಖ್ಯತೆ. ಮಕ್ಕಳ ಅನಿಸಿಕೆಗಳು, ಲೇಖನಗಳ ಕುರಿತು ಚರ್ಚೆ ಹೀಗೆ ಹಲವಾರು ವಿಷಯಗಳ ಕುರಿತು ಮಕ್ಕಳ ಜೊತೆ ಚರ್ಚಿಸುತ್ತೇವೆ. ಮಕ್ಕಳು ಕೇವಲ ಸಾಹಿತ್ಯಿಕವಾಗಿ ಬೆಳೆಯದೇ ತಾಂತ್ರಿಕವಾಗಿ ಹೊಸದನ್ನು ಕಲಿಯುತ್ತಿರುವುದು ಗಮನಕ್ಕೆ ಬಂದ ವಿಷಯ.

ಮೊದಲು ಹೇಳಿದಂತೆ ಚಿಗುರುಚಿಲುಮೆ ಕೇವಲ ಮಕ್ಕಳ ಪತ್ರಿಕೆ ಅಷ್ಟೇ ಅಲ್ಲದೇ ಪಾಲಕರ ಮತ್ತು ಶಿಕ್ಷಕರ ಪತ್ರಿಕೆಯಾಗಿ ಹೊರಹೊಮ್ಮಬೇಕೆಂಬುದು ನಮ್ಮ ಉದ್ದೇಶ . ಸಣ್ಣ ಅನುಭವಗಳು, ವಿಚಿತ್ರವೆನಸಿದ ಸಂಗತಿಗಳು,ಸುಂದರ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯುವುದು, ಚಿತ್ರಕಲೆ ಹೀಗೆ ನಮಗೆ ಮನಸ್ಸಿಗೆ ಮುದನೀಡುವ ಕಡೆ ಒಲವು ಮೂಡಿಸುವ ಕೆಲಸ ಚಿಗುರುಚಿಲುಮೆಯದ್ದು. ಹಾಗಾಗಿ ಈ ಸಂಚಿಕೆಯಲ್ಲಿ ಮಕ್ಕಳ ಸ್ವರಚಿತ ಕಥೆಗಳು, ಚುಟುಕುಗಳು, ಛಾಯಾಚಿತ್ರಗಳು ,ಚಿತ್ರಗಳಿಗೆ ಹೆಚ್ಚು ಒತ್ತು ನೀಡಲಾಗಿದೆ.

ಕ್ರಿಯಾಶೀಲ ಮತ್ತು ಸೃಜನಶೀಲ ಶಿಕ್ಷಣ ಸಂಸ್ಥೆಯಾಗಿ ಬೆಳೆಯುತ್ತಿದೆ ಬಾಲಬಳಗ . ಈ ರೀತಿಯ ವಿಶೇಷ ಪ್ರಯತ್ನಗಳಲ್ಲಿ " ಆಟದೊಂದಿಗೆ ಗಣಿತ " ವೂ ಒಂದು. ಆಟದ ಮೂಲಕ ಗಣಿತವನ್ನು ಹೇಗೆ ಕಲಿಸಬಹುದು, ಗಣಿತವನ್ನು ಹೇಗೆ ಸರಳವಾಗಿ ಮಕ್ಕಳಿಗೆ ಮನವರಿಕೆ ಮಾಡಿಕೊಡಬಹುದು ಮತ್ತು ಆಟವೂ ಆಗಿರಬೇಕು ಪಾಠವನ್ನೂ ಕಲಿತಿರಬೇಕು ಎಂಬ ವಿಚಾರದಿಂದ ಹುಟ್ಟಿಕೊಂಡ ಪ್ರಯತ್ನವಿದು. ಈ ಯೋಜನೆಯನ್ನು ನಮ್ಮ ಶಾಲೆಯಲ್ಲಿ ಪ್ರಯೋಗಿಸಿ ಬೇರೆ ಶಾಲೆಗಳಲ್ಲಿಯೂ ಪರಿಚಯಿಸಲಾಯಿತು. ಇದರ ಒಂದು ಝಲಕ್ಕನ್ನು ಈ ಸಂಚಿಕೆಯಲ್ಲಿ ತೋರಿಸಲು ಪ್ರಯತ್ನಿಸಿದ್ದೇವೆ.ಇದರ ಜೊತೆಗೆ ಮೂರನೆ ಸಂಚಿಕೆಯಿಂದ ಪ್ರಾರಂಭವಾದ, ಬಾಲಬಳಗದ ವಿಶೇಷತೆಗಳು ಮತ್ತು ಅವುಗಳ ಉದ್ದೇಶದ ಕುರಿತು ಲೇಖನಗಳನ್ನು ನೀವೆಲ್ಲ ಗಮನಿಸಿರಬಹುದು. ಈ ಬಾರಿ ಖಾದಿ ಏಕೆ ಎಂಬುದರ ವಿವರಣೆ ನೀಡಲಾಗಿದೆ.

ನಿಮ್ಮೆಲ್ಲರ ಪ್ರೋತ್ಸಾಹ ಹೆಚ್ಚುತ್ತಾಹೋದಂತೆ ಚಿಗುರುಚಿಲುಮೆ ಒಂದೊಂದೇ ಹೆಜ್ಜೆ ಇಡುತ್ತ ಬಹು ಜನರನ್ನು ತಲುಪಲು ಸಾಧ್ಯ. ನಿಮ್ಮ ಅನಿಸಿಕೆ, ಸಲಹೆ, ಸೂಚನೆಗಳನ್ನು ನಮ್ಮ ಬಳಗದೊಂದಿಗೆ ಮುಕ್ತವಾಗಿ ಹಂಚಿಕೊಳ್ಳಿ ನಮ್ಮ ಪುಟ್ಟ ಪ್ರಯತ್ನಕ್ಕೆ ಕೈಜೋಡಿಸಿ.

ಸಂಪದಾ ಸಬನೀಸ





Last issue carried a small write up in Kannada about the muktangana-- amphitheatre of our school. The audience side where we have many flower trees is getting greener by the month and in coming days will be full of shade all through the day. But the main stage still has no roof and because of the hot sun during daytime children cannot make full use of this space. Neither can we have cultural programs all round the year. Hence we need to build a roof over the stage as soon as possible. The estimated cost of this is about Rs 5 lakhs. Friends and well wishers have already contributed Rs 75000/- We request every one to help us generously. One can donate in units of Rs 500/- . More the better. Please make your donations to the following account number.

Donors can avail tax exemptions for their donations.

Bank Account Number: 00510101037568
Account name: Balabalaga Building fund,
Canara Bank

Muktangana



ಮಕ್ಕಳು ಮತ್ತು ಶಿಕ್ಷಕರು ಸೋಮವಾರ ಮತ್ತು ಗುರುವಾರಗಳಂದು ಶಾಲೆಗೆ ಖಾದಿ ಬಟ್ಟೆ ಧರಿಸಿಕೊಂಡು ಬರುವುದು- ಇದು ಬಾಲಬಳಗದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಿರುವ ಒಂದು ಪರಿಪಾಠ. ಈ ಖಾದಿ ಧರಿಸುವುದು ಕಡ್ಡಾಯದ ನಿಯಮವೇನಲ್ಲ. ಮಕ್ಕಳಿಗೆ ಮತ್ತೆ ಮತ್ತೆ ತಿಳಿಹೇಳುತ್ತ ಅವರ ಮನವೊಲಿಸುತ್ತ ಬೆಳೆದು ಬಂದಿರುವ ನಡಾವಳಿಯಿದು. ಅಂತರ್-ಶಾಲಾ ಚಟುವಟಿಕೆಗಳಲ್ಲಿ ಮತ್ತು ಶಾಲೆಯ ಹೊರಗಿನ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸುವ ಸಂದರ್ಭಗಳಲ್ಲೂ ಮಕ್ಕಳು ಖಾದಿ ಬಟ್ಟೆ, ಕೊನೇ ಪಕ್ಷ ಖಾದಿ ಜ್ಯಾಕೆಟ್ ಹಾಕಿಕೊಂಡಿರಬೇಕು ಎಂಬುದು ನಮ್ಮ ಶಾಲೆಯ ಸಂಪ್ರದಾಯ.

ಆದರೆ ಇಂಟರ್-ನೆಟ್ ಮೊಬೈಲುಗಳ ಇಂದಿನ ದಿನಗಳಲ್ಲೂ ಖಾದಿ ಯಾಕೆ?

೧. ಖಾದಿ- ಪರಿಸರ ಸ್ನೇಹಿ

೨. ಖಾದಿ ಉತ್ಪಾದನೆ ಅಕೇಂದ್ರಿತ ರೀತಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತದೆ. ಇದರಿಂದಾಗಿ ಗ್ರಾಮೀಣ ಜನತೆಗೆ ಅದರಲ್ಲೂ ಮಹಿಳೆಯರಿಗೆ ಉದ್ಯೋಗ ಸಿಗುತ್ತದೆ.

೩. ಖಾದಿ ಸರಳತೆಯ ದ್ಯೋತಕ. ಥಳಕು ಬಳುಕುಗಳೇ ಹೆಚ್ಚಾಗಿರುವ ಇಂದಿನ ಸಂಸ್ಕೃತಿಯ ಕೊಳ್ಳು-ಬಳಸು-ಬಿಸಾಕು ದಿನಗಳಲ್ಲಿ ಬದುಕಿನಲ್ಲಿ ಸರಳತೆಯನ್ನು ರೂಢಿಸಿಕೊಳ್ಳಲು ಖಾದಿ ಬಹಳ ಸಹಾಯಕ.

೪. ಖಾದಿ ಮೈಗೆ ಹಿತಕರ. ಖಾದಿ ಚಳಿಗಾಲದಲ್ಲಿ ಬೆಚ್ಚಗೆ ಹಾಗೂ ಬೇಸಿಗೆಯಲ್ಲಿ ತಂಪಾಗಿರುತ್ತದೆ.

೫. ಖಾದಿ ಆರೋಗ್ಯಕರ ಖಾದಿ ಬಟ್ಟೆ 'ಉಸಿರಾಡುವುದರಿಂದ' ಚರ್ಮದ ಮೇಲಿನ ಬೆವರು ಬೇಗನೆ ಆರಿ ಹೋಗುತ್ತದೆ. ಇದರಿಂದಾಗಿ ಚರ್ಮ ರೋಗಗಳ ಆಗುವಿಕೆ ಬಲು ಕಡಿಮೆ.

೬. ಖಾದಿ ಹಲವಾರು ರೀತಿಗಳಲ್ಲಿ ಪರಿಸರಸ್ನೇಹಿ. ಖಾದಿಯ ಉತ್ಪಾದನೆ-ಬಳಕೆ-ಬಳಕೆಯ ನಂತರದ ನಿರ್ವಹಣೆ- ಈ ಎಲ್ಲ ಹಂತಗಳಲ್ಲೂ ಪರಿಸರ ಮಾಲಿನ್ಯ ಅತ್ಯಂತ ಕಡಿಮೆ.

೭. ಖಾದಿ ನಮ್ಮ ನೆಲದ ಚರಿತ್ರೆಯ ಜೀವಂತ ಸಂಕೇತ. ಬಟ್ಟೆಯೇ ಒಂದು ನಾಡಿನ ಸ್ವಾತಂತ್ರ್ಯ ಹೋರಾಟದ ಅಂಗವಾಗಿರುವ ನಿದರ್ಶನ ಜಗತ್ತಿನ ಬೇರೆಡೆ ಎಲ್ಲಿಯೂ ಸಿಗುವುದಿಲ್ಲ. ಆದರೆ ಖಾದಿ ನಮ್ಮ ಸ್ವಾತಂತ್ರ್ಯ ಚಳುವಳಿಯ ಬಹುದೊಡ್ಡ ಭಾಗವಾಗಿತ್ತು ಅಲ್ಲದೇ ಕೋಟಿ ಕೋಟಿ ಜನರಿಗೆ ಸ್ಫೂರ್ತಿಯ ಸೆಲೆಯಾಗಿತ್ತು.

ನಾವು ಬಾಲಬಳಗದಲ್ಲಿ ಖಾದಿ ಆರಂಭಿಸಿದ ನಂತರ ಧಾರವಾಡದ ವಿಶ್ವವಿದ್ಯಾಲಯ ಕಾನೂನು ಕಾಲೇಜು, ಎಸ್.ಡಿ.ಎಂ ಇಂಜಿನಿಯರಿಂಗ್ ಕಾಲೇಜ್ ಹೀಗೆ ಹಲವು ಶಿಕ್ಷಣ ಸಂಸ್ಥೆಗಳೂ ವಾರಕ್ಕೊಮ್ಮೆ ಖಾದಿ ಅಳವಡಿಸಿಕೊಂಡಿದ್ದಾರೆ.

ಇದಲ್ಲವೇ ಸಂತೋಷ?

ಕೇವಲ ೨-೩ ವಾರಗಳಲ್ಲಿ ಹಲವಾರು ಮಹತ್ವದ ಕಾರ್ಯಕ್ರಮಗಳು ನಡೆದಿರುವುದರಿಂದ ಈ ಸಲದ ವರದಿ ಉ.......ದ್ದವಾಗಿದೆ. ಓದುವ ತಾಳ್ಮೆ ಇರಲಿ.

ಅಕ್ಟೋಬರ್ ೩ ರಿಂದ ಪ್ರಾರಂಭವಾದ ಮಧ್ಯಂತರ ರಜೆಯು ಅಕ್ಟೋಬರ್ ೧೮ ರಂದು ಮುಗಿಯಿತು. ದೀಪಾವಳಿಯ ಸಂಭ್ರಮದ ಆಚರಣೆ , ಸಿಹಿ ತಿನಿಸುಗಳ ಜಾತ್ರೆಯನ್ನು ಮುಗಿಸಿ ಎಲ್ಲ ಶಿಕ್ಷಕರೂ ೧೭ ರಂದೇ ಶಾಲೆಗೆ ಹಾಜರಾದರು. ಈ ವರ್ಷ ಶಾಲೆಯ ಕೆಲ ಕೋಣೆಗಳಿಗೂ ಸುಣ್ಣವನ್ನು ರಜೆಯಲ್ಲಿ ಹಚ್ಚಿಸಿದ್ದರಿಂದ , ಶಾಲೆಗೇ ಬಂದಾಗ ಕೂಡ ದೀಪಾವಳಿ ಎನಿಸುವಂತಿತ್ತು. ಅಂದು ಶಾಲೆಯ ಎಲ್ಲ ಸಾಮಾನುಗಳನ್ನು ವ್ಯವಸ್ತಿತವಾಗಿ ಇಟ್ಟುಕೊಂಡು, ಮರುದಿನ ಅಂದರೆ ೧೯/೧೦ ರಂದು ಹಮ್ಮಿಕೊಳ್ಳಲಾಗಿದ್ದ ಶಿಕ್ಷಕರ ಕಾರ್ಯಾಗಾರದ ಸಿದ್ದತೆಯನ್ನು ಮಾಡಿಕೊಳ್ಳಲಾಯಿತು .

ಶಿಕ್ಷಕರ ಕಾರ್ಯಾಗಾರ

ಈ ಸಲದ ಶಿಕ್ಷಕರ ಕಾರ್ಯಾಗಾರದ ವಿಷಯ 'ಬಾಲಬಳಗದ ಮೂಲತತ್ವಗಳು ಹಾಗೂ ರಜೆಯಲ್ಲಿ ಶಿಕ್ಷಕರು ಕೈಗೊಂಡ ಕಾರ್ಯ' ಎಂಬುದಾಗಿತ್ತು. ಬೆಳ್ಳಿಗ್ಗೆ ೧೦ ಕ್ಕೆ ಸರಿಯಾಗಿ ಕಾರ್ಯಾಗಾರ ಪ್ರಾರಂಭವಾಯಿತು. ಶಿಕ್ಷಕರು ಅಭಿವ್ಯಕ್ತಿಯಲ್ಲಿ ಮುಕ್ತರಾದಷ್ಟೂ , ಮಕ್ಕಳಿಗೆ ವಿಷಯ ಮುಟ್ಟುವುದು ಸುಲಭವಾಗುತ್ತದೆ ಎಂಬುದು ಇದರ ಉದ್ದೇಶ.

ನಂತರ ಬಾಲಬಳಗ 'ಧ್ಯಾನ' ಎಂಬ ವಿಷಯದ ಬಗೆಗೆ ಚರ್ಚೆ ನಡೆಯಿತು. ಧ್ಯಾನ ಎಂದರೇನು ? ಏಕೆ ? ಹೇಗೆಲ್ಲ ಮಾಡಬಹುದು ಎಂಬ ಅಂಶಗಳು ಚರ್ಚಿಸಲ್ಪಟ್ಟವು. ನಾವು ಹತ್ತಾರು ವರ್ಷಗಳಿಂದ ರೂಡಿಸಿಕೊಂಡು ಬಂದ ಈ ಚಟುವಟಿಕೆ ಸದ್ಯ ಹೇಗೆ ನಡಿಯುತ್ತಿದೆ ಎಂಬ ಬೆಳಕು ಚೆಲ್ಲಲಾಯಿತು. ಶಿಬಿರದ ಈ ಭಾಗವನ್ನು ಸಂಜೀವ ಮಾಮಾ ನಡಿಸಿಕೊಟ್ಟರು.

ನಂತರದ ಅವಧಿಯಲ್ಲಿ ಕೆಲ ತರಗತಿಗಳ ವಿಡಿಯೋ ಚಿತ್ರಣವನ್ನು ವೀಕ್ಷಿಸುವ ಕಾರ್ಯಕ್ರಮವಿತ್ತು, ಇದರಲ್ಲಿ ನಮ್ಮ ಶಾಲೆಯ ಕೆಲ ತರಗತಿಗಳನ್ನು ವೀಕ್ಷಿಸಿ ನಂತರ ಶಿಕ್ಷಕರು ಮಕ್ಕಳನ್ನು ಹೇಗೆ ನೋಡಬೇಕೆಂಬ ಬಗೆಗೆ ಇರುವ ' man at school ' ಎಂಬ ಕಿರು ಉಪನ್ಯಾಸವನ್ನು ಕೇಳಿದೆವು., ಮಗುವಿನ ಶೈಕ್ಷಣಿಕ ಪ್ರಗತಿ ಮಗುವಿನ ಮನೆಯ ಪರಿಸ್ಥಿತಿಗೆ ಎಷ್ಟು ನೇರವಾದ ಸಂಬಂಧವನ್ನು ಹೊಂದಿದೆ ಹಾಗು ಆ ಅಂಶವನ್ನು ಅರ್ಥಮಾಡಿಕೊಂಡು , ಮಗುವಿಗೆ ಬೆಂಬಲ ನೀಡುವುದು ಎಷ್ಟು ಮಹತ್ವದ ವಿಷಯ ಎಂಬುದನ್ನು ಅದು ಮನಗಾಣಿಸಿತು. 'class of rowdies' ವೀಡಿಯೊ ಕೂಡ ನೋಡಿದೆವು . ಹೆಸರೇ ಹೇಳುವಂತೆ ತರಗತಿಯಲ್ಲಿ ಇರುವ ರೌಡಿಗಳ ಸಾಮರ್ಥ್ಯವನ್ನು ಬಳಸುವಹಾಗಾದಲ್ಲಿ ಇದು ಸಾಧ್ಯ ಎಂದು ಅದು ತಿಳಿಸಿತು. ಈ ಭಾಗದಲ್ಲಿ ಸಾಕಷ್ಟು ವಿಷಯಗಳು ಚರ್ಚಿತವಾದವು. ಪುಸ್ತಕಗಳ ವ್ಯಂಗ್ಯ ಚಿತ್ರಗಳ ಅನುವಾದಗಳು. ನಾವು ಪಾಲಕರು/ ಶಿಕ್ಷಕರು ವಿಷಯಗಳನ್ನು ಹೇಗೆ ನಿರ್ವಹಿಸುತ್ತೇವೆ ಹಾಗೂ ಹೇಗೆ ನಿರ್ವಹಿಸಿದರೆ ಉತ್ತಮ ಎಂಬ ಮಾಹಿತಿಯನ್ನು ನೀಡಿದವು. ವಸಂತಾ ಮೌಶಿ ಈ ಪುಸ್ತಕವನ್ನು ಓದಿದ್ದರಿಂದ, ಅವರು ಕಾರ್ಯಾಗಾರದ ಈ ಭಾಗವನ್ನುನಡೆಸಿಕೊಟ್ಟರು.

ಊಟದ ಅವಧಿಯ ನಂತರದ ಮುಖ್ಯ ಕ್ರಿಯೆ ಎಂದರೆ ಎ.ಎಸ್.ನೀಲ್ ಅವರ 'ಸಮರಹಿಲ್' ಪುಸ್ತಕದ ಭಾಷಾಂತರದ ಸ್ವಲ್ಪ ಭಾಗವನ್ನು ಓದಿ ಶಿಕ್ಷಣ ಎಂಬ ಪರಿಕಲ್ಪನೆ ಮಗುವಿನ ಸಮಗ್ರ ಬೆಳವಣಿಗೆಗೆ ಹೇಗೆ ಪೂರಕವಾಗಬೇಕು ಎಂಬುದನ್ನು ಅರ್ಥೈಸಿಕೊಳ್ಳುವದು. ಶ್ರೀಮತಿ ಅನುಪಮಾ ಧವಳೆ ಅವರು ಅನುವಾದಿಸಿದ ಮೊದಲ ಭಾಗ 'ಸಮರಹಿಲ್' ಶಾಲೆಯ ಮುಖ್ಯ ಗುರುಗಳ ಬಗೆಗೆ ಹೇಳುತ್ತದೆ. ವಿದ್ಯಾರ್ಥಿಯೊಬ್ಬ/ಳು ಹೇಗೆ ಆತ್ಮವಿಶ್ವಾಸವನ್ನು ಶಾಲಾ ವಾತಾವರಣದ ಮೂಲಕ ಪಡೆಯಲು ಸಾಧ್ಯವಿದೆ ಎಂಬುದನ್ನು ವಿವರಿಸುವ ಈ ಭಾಗ ಅತ್ಯಂತ ಸರಳ ಹಾಗೂ ಅರ್ಥಗರ್ಭಿತವಾಗಿದೆ. ಕೊನೆಯಲ್ಲಿ ಬಾಲಬಳಗದ ಹಿನ್ನಲೆಯಲ್ಲಿ 'ಸಮರಹಿಲ್' ಪುಸ್ತಕದ ಅಂಶಗಳು ಚರ್ಚಿತವಾದವು. ಭಾಷಾಂತರ ಹಾಗೂ ಸಮರಹಿಲ್ ಶಾಲೆಯ ಪರಿಕಲ್ಪನೆ ಎಲ್ಲ ಶಿಕ್ಷಕರಿಗೂ ಸ್ಪಷ್ಟವಾದವು. ಇದನ್ನು ಪ್ರತಿಭಾ ಮೌಶಿ ನಡೆಸಿಕೊಟ್ಟರು.

ನಂತರದ ಕೊನೆಯ ಭಾಗದಲ್ಲಿ ಶಿಕ್ಷಕರು ರಜೆಯಲ್ಲಿ ಮಾಡಿದ ಪ್ರಯತ್ನಗಳು ಹಾಗೂ ಶಿಬಿರದ ಬಗೆಗೆ ಹಿಮ್ಮಾಹಿತಿ ನಡೆದವು. ಉತ್ತರಪತ್ರಿಕೆಗಳ ಮೌಲ್ಯಮಾಪನ ಹಾಗೂ ಪಾಠ ಟಿಪ್ಪಣಿಗಳ ಜೊತೆಗೆ ಊರಿಗೆ ಹೋಗಿ, ಬಂದು, ದೀಪಾವಳಿಯ ತಯಾರಿ ಮಾಡಿ, ಕೆಲಪುಸ್ತಕಗಳನ್ನು ಓಡುವು ಸಾಧ್ಯವಾಯಿತು ಎಂಬ ಮಾತಿನೊಂದಿಗೆ ಶಿಬಿರ ಉತ್ತಮವಾಗಿ ನಡೆದು ಉಪಯುಕ್ತ ಎನಿಸಿತು ಎಂಬ ಭಾವ ವ್ಯಕ್ತವಾಯಿತು.

ಪ್ರತಿ ಸಲವೂ ಶಿಕ್ಷಕರ ಶಿಬಿರಗಳಿಗೆ ವೀಕ್ಷಕರಾಗಿ ಒಂದಿಬ್ಬರು ಪಾಲಕರನ್ನು ಆಮಂತ್ರಿಸಲಾಗಿರುತ್ತದೆ. ಹಾಗೇ ಈ ಸಲ ಶೀಮತಿ ವಿಜಯಶ್ರೀ ಸುರೇಂದ್ರ ಹಾಗೂ ಶ್ರೀ.ಕುಕನೂರ್ ಇವು ಶಿಬಿರದಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಶಿಕ್ಷಕರು, ಶಾಲೆ ಮಕ್ಕಳ ಶಿಕ್ಷಣಕ್ಕಾಗಿ ಎಷ್ಟೊಂದು ಪರಿಶ್ರಮ ಪಡುತ್ತೀರಿ ಎಂದು ಮೆಚ್ಚುಗೆಯನ್ನು ಸೂಚಿಸಿದರು.

ಹಿಂದಿನ ಎರಡು ಶಿಬಿರಗಳನ್ನು ಡೇಸಿ, ಅಕ್ಕಮ್ಮ, ಮೀನಾಕ್ಷಿ ನಡೆಸಿದ್ದರೆ, ಈ ಶಿಬಿರವನ್ನು ರೋಹಿಣಿ ಮತ್ತು ಗ್ರೀಟಾ ನಡೆಸಿಕೊಟ್ಟರು.

ಒಟ್ಟಾರೆ ಶಿಬಿರು ಯಶಸ್ವಿಯಾಯಿತು.

ನವೆಂಬರ್ ೧, ಕರ್ನಾಟಕ ರಾಜ್ಯೋತ್ಸವ

ನವೆಂಬರ್ ೧ ಕನ್ನಡಿಗರಿಗೆ ದೊಡ್ಡ ಹಬ್ಬ. ಈ ವರ್ಷ ೫೯ನೇ ಕನ್ನಡ ರಾಜೋತ್ಸವ. ಶಾಲೆಯಲ್ಲಿ ಬೆಳಿಗ್ಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಹೊಸ ವಿಚಾರಗಳು 'ಬಾಲಬಳಗದ ತಲೆ'ಗೆ ಪಕ್ಕನೆ ಹೊಳೆಯುತ್ತವೆ. ಹಾಗೇ ಈ ಸಲ ಬಂದ ಅದ್ಭುತ ವಿಚಾರವೆಂದರೆ ಎಸ್.ಎಸ್.ಎಲ್.ಸಿ ಮುಗಿಸಿದ ಹಳೆಯ ವಿದ್ಯಾರ್ಥಿ/ನಿಯನ್ನು ಅತಿಥಿಯಾಗಿ ಕರೆಯುವುದು ಎಂದು ಯೋಚನೆ ಬಂದದ್ದೆ ತಡ ಎಲ್ಲರಿಗು ಅದ್ಭುತ ಎನಿಸಿ, ಒಪ್ಪಿಗೆ ಸಿಕ್ಕು ಅದು ಕಾರ್ಯರೂಪಕ್ಕೂ ಬಂತು.

೨೦೧೦ ರಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿ ಸಿವಿಲ್ ವಿಭಾಗದಲ್ಲಿ ಡಿಪ್ಲೋಮಾ ಪದವಿ ಪಡೆದು cet ಅಲ್ಲಿ/ ಪ್ರವೇಶಪರೀಕ್ಷೆಯಲ್ಲಿ ಉನ್ನತ ಸ್ಥಾನ ಗಳಿಸಿ, ಈಗ ಬಿ.ಇ(ಬಿ.ವಿ.ಬಿ ಕಾಲೇಜು, ಹುಬ್ಬಳ್ಳಿ) ಮಾಡುತ್ತಿರುವ ನಿಷ್ಠಾವಂತ, ಪ್ರಾಮಾಣಿಕ ವಿದ್ಯಾರ್ಥಿ ಸುಮಧ್ವ ಮುಜುಮದಾರ್ ಈ ಸಲದ ನಮ್ಮ ಅತಿಥಿಯಾದ. ಅತಿಥಿ ಸ್ಥಾನಕ್ಕೆ ನಾನು ಚಿಕ್ಕವ ಎಂದು ಹೇಳಿದರೂ ಅವನ ಆತ್ಮವಿಶ್ವಾಸ ಎಷ್ಟಿತ್ತೆಂದರೆ ಒಪ್ಪಿಕೊಂಡುಬಿಟ್ಟ. ನಮಗೆ ಖುಷಿ, ಕುತೂಹಲ!! ಮಕ್ಕಳಿಗೂ ಇದು ಮೋಜಾಗಿತ್ತು. ಆದರೆ ಮಕ್ಕಳು ಸಿಕ್ಕ ಒಳ್ಳೆಯದೆಲ್ಲವನ್ನೂ ಹೀರಿಕೊಂಡರೆ ಏನಾಗಬಹುದು/ ನಾನಾಗಬಹುದು ಎಂಬುದನ್ನು ತೋಇಸಿದ ಆತ. ಶಾಲಾಚಟುವಟಿಕೆಗಳು ಮುಂದಿನ ಕಾಲೇಜು ಶಿಕ್ಷಣದಲ್ಲಿ ಬಹಳ ಉಪಯುಕ್ತವಾಗುತ್ತವೆ ಎಂಬ ಮಾತು ಹೇಳಿ, ನಾವು ಹುಟ್ಟಿದ ಕ್ಷಣದಿಂದಲೇ ಕನ್ನಡಿಗರು, ನಮ್ಮ ಹೆಸರು ನಂತರ ಬರುತ್ತದೆ ಎಂಬ ಅದ್ಭುತ ಮಾತನ್ನು ಹೇಳಿದ.

ಕಾರ್ಯಕ್ರಮಮದಲ್ಲಿ ೫,೬ ಮತ್ತು ೭ನೇ ತರಗತಿಯ ಮಕ್ಕಳಿಗೆ 'ಕರ್ನಾಟಕ ರಸಪ್ರಶ್ನೆ' ಕಾರ್ಯಕ್ರಮವಿತ್ತು. ಎಲ್ಲ ವಿದ್ಯಾರ್ಥಿಗಳು ಅತಿ ಹುರುಪಿನಿಂದ ಇದರಲ್ಲಿ ಭಾಗವಹಿಸಿದರು. ಎಲ್ಲರಿಗೂ ಬಹಳ ಹೊಸ ಮಾಹಿತಿಗಳು ದೊರೆತವು. ಶ್ಯಾಮ್, ವಾರಾಹಿ, ಕೇದಾರೇಶ್ವರ, ಶಂಕರ ಜೋಷಿ ಹಾಗೂ ನಚಿಕೇತರ ತಂಡ ಪ್ರಥಮ ಸ್ಥಾನ ಪಡೆಯಿತು. ಒಟ್ಟಿನಲ್ಲಿ ರಸಪ್ರಶ್ನೆ ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯಿತು.

೮,೯, ಮತ್ತು ೧೦ನೇ ತರಗತಿಯ ವಿದ್ಯಾರ್ಥಿಗಳು ಗಂಗೂಬಾಯಿ ಹಾನಗಲ್, ಯು.ಆರ್. ಅನಂತಮೂರ್ತಿ ಹಾಗೂ ಗೋಪಾಲಕೃಷ್ಣ ಅಡಿಗರ ಬಗೆಗೆ ಮಾತನಾಡಿ ಅವರ ಹಿರಿಮೆಯನ್ನು, ಸಾಧನೆಗಳನ್ನು ತಿಳಿಸಿಕೊಟ್ಟರು.

# ಶಾಲೆಯ ವರದಿ

ಅಂದು ಶಾಲೆಯನ್ನು ನೋಡಲು ಧಾರವಾಡದ ಸುರೇಶಬಾಬು ಮತ್ತು ದಾವಣಗೆರೆಯ ರಾಘವ ಅವರ ಕುಟುಂಬಗಳು, ಮೈಸೂರಿನಿಂದ ರಮೇಶ ಕಿಕ್ಕೇರಿ ಹಾಗೂ ಅವರ ಪರಿವಾರ ಮತ್ತು ಸ್ನೇಹಿತರು ಬಂದಿದ್ದರು. ಬಹಳ ಖುಷಿಪಟ್ಟರು.

೧೦. ೩೦ ರಿಂದ ೧೨. ೪೫ ರವರೆಗೆ ಪುಣೆಯ ಶ್ರೀ. ಜಿನಾನ್ ಇವರು 'ಮಕ್ಕಳು ಹೇಗೆ ಕಲಿಯುತ್ತಾರೆ' ಎಂಬ ವಿಷಯದ ಬಗೆಗೆ ಶಿಕ್ಷಕರೊಂದಿಗೆ ಸಂವಾದ ನಡೆಸಿದರು. ಮಕ್ಕಳಿಗೆ ಮುಕ್ತವಾದ ವಾತಾವರಣವನ್ನು ಕೊಟ್ಟಷ್ಟೂ ಅವರ ಕಲಿಕೆ ಸುಲಭ ಹಾಗೂ ವಿಸ್ತಾರವಾಗಲು ಸಾಧ್ಯ ಎಂಬ ಅಂಶ ಮನದಟ್ಟಾಯಿತು.ಇಲ್ಲಿ ಕಲಿಸುವು ಗೌಣ. ಕಲಿಯಲು ಮಕ್ಕಳನ್ನು ಬಿಡುವದು, ಕಲಿಕಾ ವಾತಾವರಣವನ್ನು ಸೃಷ್ಟಿಸುವದು, ನಂತರ ನಡುಯುವ ಸಹಜ ಕಲಿಕೆಯನ್ನು ವೀಕ್ಷಿಸುವದು ಈಗ ನಿಜವಾಗಿ ಆಗಬೇಕಾಗಿರುವದು ಎಂಬುದು ಅವರ ಸಿದ್ಧಾಂತ. ಉದಾಹರಣೆಗಳೊಂದಿಗೆ ಈ ವಿಷಯವನ್ನು ವಿವರಿಸಿದ ಅವರು, ಇದಕ್ಕಾಗಿ ಶಿಕ್ಷಕರಿಗೆ ತಾಳ್ಮೆ ಅಗತ್ಯ ಎಂದರು.
ಅಂದು ಸಂಜೆ ವಿದ್ಯಾವರ್ಧಕ ಸಂಘದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿ, 'ಕನ್ನಡ ನಾಡು ನುಡಿ'ಗಳ ಬಗೆಗೆ ರೂಪಕವನ್ನು ಪ್ರದರ್ಶಿಸಿದರು. ಹಳೆಗನ್ನಡದಿಂದ ಹೊಸಗನ್ನಡದವರೆಗೆ ಕನ್ನಡ ಸಾಹಿತ್ಯ ಹೇಗೆ ಬೆಳೆಯುತ್ತ ಬಂದಿದೆ ಎಂಬುದನ್ನು ಈ ಕಾರ್ಯಕ್ರಮ ತೋರಿಸಿಕೊಟ್ಟಿತು.

ದಿ. ೮.೧೧. ೨೦೧೪ ರಂದು ನಮ್ಮ ಬಾಲಬಳಗ ಶಾಲೆಯಲ್ಲಿ ೫ ರಿಂದ ೧೦ ನೇ ತರಗತಿಯ ಮಕ್ಕಳು ಹಾಗು ಎಲ್ಲ ಶಿಕ್ಷಕರು ಸೇರಿ ಕನಕ ಜಯಂತಿಯನ್ನು ಆಚರಿಸಿದೆವು
ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಹಾಡಿನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು . ೫ ಮತ್ತು ೬ ತರಗತಿಯ ಮಕ್ಕಳಿಗೆ ಭಕ್ತಿಗೀತೆ ಹಾಗೂ ಭಾವಗೀತೆ , ೭,೮,೯ ಮತ್ತು ೧೦ ನೇ ತರಗತಿಯ ಮಕ್ಕಳಿಗೆ ದಾಸರ ಪದಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ೫,೬ ನೇ ತರಗತಿಯ ಮಕ್ಕಳಾದ ಸಮುದ್ಯತಾ, ರಂಗ >ಪ್ರಥಮ ಶ್ರಾವಣಿ, ತಿಬೇಲಿ >ದ್ವಿತೀಯ ಹಾಗೂ ರಾಘವ ಕೆರೂರ >> ತೃತೀಯ ಸ್ಥಾನ ಪಡೆದರು ೭, ೮ ನೇ ತರಗತಿಯ ಮಕ್ಕಳಾದ ಸೌರಭ ಸಬನಿಸ್ -- ಪ್ರಥಮ, ಭರತ್ ಕುಲಕರ್ಣಿ -ದ್ವಿತೀಯ ಹಾಗು ಸ್ನೇಹಾ -ತೃತೀಯ ಸ್ಥಾನ ಪಡೆದರು. ೯, ೧೦ ನೇ ತರಗತಿಯಲ್ಲಿ ಪದ್ಮಶ್ರೀ ಸರದೇಶ್ ಮುಖ್ -ಪ್ರಥಮ , ನಿರಿಶಾರಾವ್ ದ್ವಿತೀಯ ಹಾಗೂ ಸುಮೇಧ ಕುಲಕರ್ಣಿ -ತೃತೀಯ ಸ್ಥಾನ ಪಡೆದರು.
ಈ ಕಾರ್ಯಕ್ರಮಕ್ಕೆ ಅಥಿತಿ ಹಾಗೂ ನಿರ್ಣಾಯಕರಾಗಿ ಶ್ರೀಮತಿ ಅಂಜಲಿ ಮೆಹೆಂದಲೆ , ಕುಮಾರಿ ವೀಣಾ ಬಡಿಗೇರ ಹಾಗೂ ಕುಮಾರ ರಕ್ಷಿತ್ ಕುಲಕರ್ಣಿ ಇವರು ಆಗಮಿಸಿದ್ದರು. ಇವರಿಗೆ ಹೂಗುಚ್ಛ ಹಾಗೂ ನೆನಪಿನ ಕಾಣಿಕೆ ಕೊಟ್ಟು ಸ್ವಾಗತಿಸಲಾಯಿತು.
"ಸಂಗೀತವೆಂದರೆ ಒಂದು ದೊಡ್ಡ ಸಾಧನೆ ಇದ್ದಂತೆ. ಅದನ್ನು ಸುಲಭವಾಗಿ ಪಡೆಯಲು ಸಾಧ್ಯವಿಲ್ಲ. ಅದಕ್ಕಾಗಿ ದಿನಂಪ್ರತಿ ಅಭ್ಯಾಸಮಾಡುವುದು ತುಂಬಾ ಅವಶ್ಯ. ಎಷ್ಟೇ ಕೆಲಸವಿದ್ದರೂ ಯಾವುದೇ ತೊಂದರೆ ಬಂದರೂ ಈ ರೂಡಿಯನ್ನು ತಪ್ಪಿಸದಿದ್ದರೆ ಸಂಗೀತವಷ್ಟೇ ಅಲ್ಲ ಯಾವುದನ್ನಾದರೂ ಸಾಧಿಸಲು ಸಾಧ್ಯ" ಎಂದು ಅತಿಥಿಗಳಾದ ಅಂಜಲಿ ಮೆಹೆಂದಳೆಯವರು ಹೇಳಿದರು. ೯ ನೇ ತರಗತಿಯ ಸುಧನ್ವ ಕುಲಕರ್ಣಿ ಕನಕದಾಸರ ಬಗ್ಗೆ ಹೇಳಿದನು. ಕಾರ್ಯಕ್ರಮದ ಕೊನೆಗೆ ನಿರ್ಣಾಯಕರು ಒಂದೊಂದು ಹಾಡನ್ನು ಹಾಡಿ ಮಕ್ಕಳಿಗೆ ಬಹುಮಾನ ವಿತರಣೆ ಮಾಡಿದರು

ಈ ಕಾರ್ಯಕ್ರಮದಲ್ಲಿ ಅತಿಥಿಗಳ ಪರಿಚಯವನ್ನು ೧೦ನೇ ತರಗತಿಯ ಮಕ್ಕಳಾದ ಪದ್ಮಶ್ರೀ , ನಿರಿಶಾ , ಹಾಗೂ ಮಾನಸಿ ಇವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಪೂಜಾ ಮಾಡಿದಳು. ವರ್ಷಾ ಇವಳು ವಂದನಾರ್ಪಣೆ ಮಾಡಿ ಕಾರ್ಯಕ್ರಮವನ್ನು ಮುಗಿಸಲಾಯಿತು.
ಖ್ಯಾತನಾಮರಾದ ಕನಕದಾಸರ ಜಯಂತಿಯನ್ನು ಬಾಲಬಳಗದಲ್ಲಿ ಮಕ್ಕಳಿಗೆ ಸಂಗೀತದ ಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ಆಚರಿಸಲಾಗುತ್ತದೆ. ಶಾಲೆಯಲ್ಲಿ ಮೊದಲಿನಿಂದಲೂ ಸಂಗೀತದ ತರಗತಿಗಳು ನಡೆಯುತ್ತಿದ್ದು, ಹಾಡುವ ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯವನ್ನು ಕಂಡುಕೊಳ್ಳಲು ಇದೊಂದು ಅವಕಾಶ. ನಾಲ್ಕು ಜನರ ಮುಂದೆ ಹೇಗೆ ಹಾಡುವುದು ಎಂಬ ಹಿಂಜರಿಕೆಯಿಂದ ಹೊರಬಂದು, ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು, ಮುಂದೆ ಸಂಗೀತವನ್ನು ಬೆಳೆಸಿಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಿದೆ. ಮಾತಾಡಲು ಹಿಂಜರಿಯುವ ಮಗು, ಹಾಡಿದರೆ ಹಾಡಿ ಬಹುಮಾನ ಪಡೆದರೆ ಅದರಂಥ ಅದ್ಭುತ ಇನ್ನಿಲ್ಲ.

೧೧/೧೧ ಬಾಲಬಳಗ ಹಾಗೂ ಉತ್ತರ ಕರ್ನಾಟಕ ಲೇಖಕಿಯರ ಸಂಘ ಇವುಗಳ ಸಹಯೋಗದಲ್ಲಿ ಕರ್ನಾಟಕ ವಿದ್ಯಾ ವರ್ಧಕ ಸಂಘದಲ್ಲಿ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅವರ ದತ್ತಿಕಾರ್ಯಕ್ರಮದ ಅಂಗವಾಗಿ ' ರಾಜ್ಯಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು' ಎಂಬ ವಿಷಯದ ಬಗೆಗೆ ಚರ್ಚೆ ನಡೆಯಿತು. ಇದರಲ್ಲಿ ಬಾಲಬಳಗ ಶಿಕ್ಷಕರು ಹಾಗೂ ಪಾಲಕರು ವಿಷಯದಪರವಾಗಿ ಹಾಗೂ ಉ.ಕ . ಲೇ. ಸಂಘದ ಸದಸ್ಯರು ವಿಷಯದ ವಿರೋಧವಾಗಿ ಮಾತನಾಡಿದರು . ಎರಡೂ ಗುಂಪುಗಳಲ್ಲಿ ನಾಲ್ಕು-ನಾಲ್ಕು ಜನರಿದ್ದರು.
ಪ್ರಾರಂಭದಲ್ಲಿ ಬಾಲಬಳಗ ಮಕ್ಕಳು ಸ್ವಾಗತಗೀತೆ(ಹೆಸರಾಗಲಿ ಕರ್ನಾಟಕ ಉಸಿರಾಗಲಿ ಕರ್ನಾಟಕ )ಹಾಗೂ ಅಣಕುಗೀತೆ (ಕನ್ನಡದ ಇಂಗ್ಲೀಷ ನುಂಗಿತ್ತ ) ಇವುಗಳನ್ನು ಪ್ರಸ್ತುತಪಡಿಸಿದರು. ನಂತರ ಉ.ಕ.ಲೇ. ಸಂಘದ ಅಧ್ಯಕ್ಷರಾದ ಡಾ. ಮಂದಾಕಿನಿ ಪುರೋಹಿತ ಅವರು ಎಲ್ಲರನ್ನು
ಸ್ವಾಗತಿಸಿದರು. ಪ್ರಾಸ್ತಾವಿಕ ಮಾತುಗಳನ್ನಾಡಿದರು. ನಂತರ ವಿಷಯಮಂಡನೆ ಪ್ರಾರಂಭವಾಯಿತು.ಒಬ್ಬರು ಪರ ಹಾಗೂ ಒಬ್ಬರು ವಿರೋಧವಾಗಿ ಹೀಗೆ ಈ ಕ್ರಮದಲ್ಲಿ ಚರ್ಚೆ ನಡೆಯಿತು. ವಿಷಯಯದ ಪರವಾಗಿ ಮಾತನಾದಿದವರಲ್ಲಿ ಮೊದಲಿಗರಾಗಿ
ಶ್ರೀಮತಿ ವಸಂತಾ ಕನವಳ್ಳಿ (ಶಿಕ್ಷಕಿ ) ಪ್ರಾಥಮಿಕ
ಶಿಕ್ಷಣದಲ್ಲಿ ರಾಜ್ಯ ಭಾಷೆ ಮಹತ್ವದ್ದು ಎಂಬ ಅಂಶವನ್ನು ಒಂದೆರಡು ನಿಜ ಉದಾಹರಣೆಗಳೊಂದಿಗೆ
ಹಾಗೂ ತಮ್ಮ ಮಕ್ಕಳ ಶಿಕ್ಷಣದಬಗೆಗಿನ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡರು. ಪರಿಚಿತ ಭಾಷೆ ನೀಡುವ ಗಟ್ಟಿತನ, ಆತ್ಮವಿಶ್ವಾಸಗಳನ್ನು ಅರಿಯದ, ಪರಭಾಷೆ ನೀಡದು. ಹೀಗಾಗಿ ಮಗುವಿನ ವ್ಯಕ್ತಿತ್ವ ವಿಕಸನದಲ್ಲಿ ಅಡಚಣೆ ಉಂಟಾಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. (ಆದ್ದರಿಂದ ಮಗು ಬೆಳೆದು ಸಹಜ ವ್ಯಕ್ತಿ ಆಗಬೇಕಾದರೆ ರಾಜ್ಯಭಾಷೆಯೇ ಕಲಿಕಾ ಮಾಧ್ಯಮವಾಗಬೇಕು). ಕೊನೆಯಲ್ಲಿ ನೆಲ್ಸನ್ ಮಂಡೇಲಾ ಅವರ “ಪರಿಚಿತ ಭಾಷೆಯಲ್ಲಿ ಆಡಿದ ಮಾತು ವ್ಯಕ್ತಿಯ ಮೆದುಳು, ಹೃದಯ ಹಾದು ನಾಲಗೆಯನ್ನು ಮುಟ್ಟುತ್ತದೆ. ಮೆದುಳು ಶಬ್ದಗಳನ್ನು ಗ್ರಹಿಸಿ, ಹೃದಯ ಭಾವವನ್ನು ಅರ್ಥೈಸಿಕೊಂಡು, 'ನಾಲಗೆ' ಪ್ರತಿಕ್ರಿಯೆಯನ್ನು ಮಾಡುತ್ತದೆ. ಅದೇ ಆಂಗ್ಲ/ಅಪರಿಚಿತ ಭಾಷೆ ಮಾತಾದರೆ, ಶಬ್ದ ಅಥವಾ ಶಬ್ದದ ಹಿಂದಿನ ಧ್ವನಿ ಮಾತ್ರ ಕೇಳುತ್ತದೆ. ಹೃದಯ ಮತ್ತು ನಾಲಗೆಗಳ ಕೆಲಸವೇ ಇಲ್ಲ.

ಹೀಗಾಗಿ ಆರ್ದ್ರಭಾವದ ಕೊರತೆ ಉಂಟಾಗಿ ಶುಷ್ಕ ವ್ಯಕ್ತಿತ್ವ ಬೆಳೆಯುತ್ತದೆ. ಇದರಿಂದ ಮಾನವೀಯ ಸಮಾಜವನ್ನು ನಾವು ಹುಡುಕುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಸುಖೀ, ಸಮಾಜಮುಖೀ ವ್ಯಕ್ತಿತ್ವಗಳ ಬೆಳವಣಿಗೆ ರಾಜ್ಯಭಾಷೆಯೇ ಶಿಕ್ಷಣ ಮಾಧ್ಯಮವಾದಾಗ ಸಾಧ್ಯ" ಎಂದು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ಶಿಕ್ಷಕರಾದ ಶ್ರೀ ಅಶೋಕ ಜೋಶಿ ಅವರು ಇಂಗ್ಲಿಷ್ ಮಾಧ್ಯಮ/ಭಾಷೆ ಭಾರತದಲ್ಲಿ ಕಾಲೂರಲು ಕಾರಣವೇನು ಎಂಬುದನ್ನು ಆಧಾರಸಹಿತವಾಗಿ ವಿವರಿಸಿದರು. ಇಂಗ್ಲಿಷ್ ಒಂದು ಭಾಷೆಯಾಗಿ ಬಂದದ್ದು. ನಂತರ ತನ್ನ ಕಬಂಧ ಬಾಹುಗಳನ್ನು ಚಾಚಿ ಎಲ್ಲವನ್ನು ನುಂಗಿ ನೀರು ಕುಡಿಯುತ್ತದೆ. ಕಾರಕೂನರನ್ನು ತಯಾರಿಸಲು ಬಳಸಿದ ಈ ಭಾಷೆ ಎಲ್ಲರ ಒಡೆಯನಾಗಿ ಆಳುತ್ತಿದೆ. ಆದರೂ ಕೂಡ ಅದು ಪರಿಸರ ಭಾಷೆಯ ಗಟ್ಟಿತನವನ್ನು ಹೊಂದಿರುವುದು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಶ್ರೀ ಗುರುಮೂರ್ತಿ ಮೆಹೆಂದಳೆ ಅವರು "ಹೌದು. ಶಿಕ್ಷಣ ಮಾಧ್ಯಮ ರಾಜ್ಯಭಾಷೆಯೇ ಆಗಬೇಕು. ಆಗಲೇಬೇಕು."ಎಂದರು. "ಕರ್ನಾಟಕದ ರಾಜ್ಯಭಾಷೆಯಾದ ಕನ್ನಡವನ್ನು ಉಳಿಸಲು, ಬೆಳೆಸಲು ಈಗ ಮಾತುಗಳಿಗಿಂತ ಕೃತಿಗಳ ಅವಶ್ಯಕತೆ ಇದೆ. ಇದು ನಮ್ಮಿಂದಲೇ ಪ್ರಾರಂಭವಾಗಬೇಕು. ನಾನು ಇದನ್ನು ಪ್ರಾರಂಭಿಸುತ್ತೇನೆ" ಎಂದರು.

ಇನ್ನೊಬ್ಬ ಪಾಲಕಿ ವಿಜಯಶ್ರೀ ಸುರೆಂದ್ರ ಅವರು ಕೂಡ ಮಗುವಿನ ತರ್ಕಶಕ್ತಿಯ ಬೆಳವಣಿಗೆಗೆ, ಭಾವನೆಗಳ ಅಭಿವ್ಯಕ್ತಿಗೆ ರಾಜ್ಯಭಾಷೆ/ಮಾತೃಭಾಷೆಯೇ ಉತ್ತಮ ಎಂದರು. ರಂಗಭೂಮಿ ಕ್ಷೇತ್ರದಲ್ಲಿ ಕೂಡ ಅನುಭವವನ್ನು ಹೊಂದಿರುವ ಅವರು, ಮಕ್ಕಳನ್ನು ಹತ್ತಿರದಿಂದ ನೋಡಿದ ಆಧಾರದಿಂದ ರಾಜ್ಯಭಾಷೆಯಲ್ಲಿ ಶಿಕ್ಷಣ ಪಡೆಯುವ ಮಗುವಿಗೆ ಕಲಿಕೆಯಲ್ಲಿ ಇರುವ ಆಸಕ್ತಿ, ಆಂಗ್ಲಮಾಧ್ಯಮದಲ್ಲಿ ಕಲಿಯುವ ಮಗುವಿನಲ್ಲಿ ಕಾಣುವುದಿಲ್ಲ. ಏಕೆಂದರೆ ಅನ್ಯ ಭಾಷೆಯು ನಮಗೆ ಮಾಹಿತಿಯನ್ನು ನೀಡುತ್ತದೆಯೇ ಹೊರತು ಆನಂದವನ್ನು, ಅನುಭವವನ್ನಲ್ಲ. ಹೀಗಾಗಿ ಶಾಲೆ ಕೂಡ ನಮಗೆ ಬೇಕೆನಿಸುವುದಿಲ್ಲ. ಮಕ್ಕಳನ್ನು ಆಂಗ್ಲಮಾಧ್ಯಮ ಶಾಲೆಗೆ ಕಳಿಸುವಲ್ಲಿ ಪಾಲಕರ ಉದ್ದೇಶ ಒಳ್ಳೆಯದೇ ಇದ್ದರೂ ಅದರ ಪರಿಣಾಮ ಮಕ್ಕಳ ಮೇಲೆ ಹೇಗಿರುತ್ತದೆ ಎಂದು ಅವರು ಯೋಚಿಸುವುದಿಲ್ಲ ಎಂದರು. ಮುಂದಿನ ಜೀವನದ ಆರ್ಥಿಕ ಸ್ಥಿರತೆಗಾಗಿ ಅವರು ಈ ರೀತಿಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಆದರೆ, ಅದರ ಬಗೆಗೆ ಸ್ವಲ್ಪ ಎಚ್ಚರವಹಿಸುವುದು ಒಳ್ಳೆಯದು ಎಂದರು.

ವಿಷಯದ ವಿರೋಧವಾಗಿ ಮಾತನಾಡಿದ ಉ.ಕ.ಲೇ ಸಂಘದ ಸದಸ್ಯೆಯರು ಸದ್ಯದ ಸ್ಪರ್ಧಾತ್ಮಕ ಯುಗದಲ್ಲಿ ಕನ್ನಡದ ಬೇರುಗಳನ್ನೇ ಹಿಡಿದು ಕುಳಿತರೆ ಏನೂ ಆಗುವುದಿಲ್ಲ ಎಂದರು. ಇಂದಿನ ವಿಜ್ಞಾನ ಯುಗದಲ್ಲಿ ಕಂಪ್ಯೂಟರ್ ತಂತ್ರಜ್ಞಾನದ ಕಾಲದಲ್ಲಿ, ಮಂಗಳ ಗ್ರಹಕ್ಕೆ ಕಾಲಿರಿಸುವ ಸಂದರ್ಭದಲ್ಲಿ ಇಂಗ್ಲೀಷ ಅತಿಮುಖ್ಯವಾದ ಏಕೈಕ ಭಾಷೆ ಎಂದರು. Global village ವಿಶ್ವಗ್ರಾಮದ ಕಲ್ಪನೆಯ ಈ ಕಾಲಘಟ್ಟದಲ್ಲಿ ಎಲ್ಲರ ಕೈಯಲ್ಲಿ ಮೊಬೈಲಗಳು ಹಾಗೂ ಎಲ್ಲರ ತೊಡೆಯ ಮೇಲೆ ಲ್ಯಾಪ್ಟಾಪಗಳು ಇರುವಾಗ ಕನ್ನಡ ನಿತ್ಯ, ಕನ್ನಡವೇ ಸತ್ಯ, ಕನ್ನಡವೇ ಎಲ್ಲ ಅಂದರೆ ಸಾಧನೆ ಸಾಧ್ಯವಿಲ್ಲ. ಕನ್ನಡಿಗರು ವಿದೇಶಗಳಿಗೆ ಹೋಗಿ ತಮ್ಮ ಬದುಕುಗಳನ್ನು ಸುಧಾರಿಸಿಕೊಳ್ಳುವದು ಬೇಡವೇ? ಎಂದು ಪ್ರಶ್ನಿಸಿದರು. ಕನ್ನಡ ಶಾಲೆಗಳಲ್ಲಿ ಉತ್ತಮ ಶಿಕ್ಷಕರೆಲ್ಲಿದ್ದಾರೆ ಎಂದರು. ಅವರು ಕನ್ನಡವನ್ನು ಸರಿಯಾಗಿ ಕಲಿಸುವುದಿಲ್ಲ. ಹೀಗಾಗಿ ಈಗಿನ ಕಾಲಮಾನಕ್ಕೆ ಇಂಗ್ಲೀಷ ಭಾಷೆಯೇ ಕಲಿಕಾ ಮಾಧ್ಯಮವಾಗಬೇಕೆಂದರು. ಇವರೆಲ್ಲಾ ಸಾಕಷ್ಟು ಆವೇಶಭರಿತರಾಗಿ ಮಾತನಾಡಿದರು.

ಬೇರೆ ಬೇರೆ ಭಾಷೆಗಳ ಕಲಿಕೆಯಿಂದ ಆಗುವ ಲಾಭಗಳ ಬಗೆಗೆ ಹೆಚ್ಚುವ ಆತ್ಮವಿಶ್ವಾಸದ ಬಗೆಗೆ ಮಾತನಾಡಿದರು. ಶಬ್ದಗಳನ್ನು ಭಾಷಾಂತರ ಮಾಡಿ ಬಳಸುವುದು ಮೂರ್ಖತನವೇ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಶಿಕ್ಷಣ ಮಾಧ್ಯಮದ ಅಂಶವೇ ಅಲ್ಲಿ ಕಂಡು ಬರಲಿಲ್ಲ. ಸಂಪೂರ್ಣ ಇಂಗ್ಲಿಷ್ ಮಾಧ್ಯಮದ ಪರವಾಗಿ ತಾವೆಲ್ಲ ಮಾತನಾಡಿದರೂ ತಾವು ಕನ್ನಡಿಗರೇ. ಕನ್ನಡ ಕಲಿಸಲು ತಾಯಂದಿರು ಸಮಯ ನೀಡಬೇಕು. ಕನ್ನಡ ಪುಸ್ತಕಗಳನ್ನು ಓದಿ ಆನಂದಿಸುವಷ್ಟು ಕನ್ನಡ ಭಾಷೆ ಕನ್ನಡ ಮಕ್ಕಳಿಗೆ ಬರಲೇಬೇಕು ಎಂದರು.

ವಿಷಯಾಂತರವಾದಂತೆ ಎಲ್ಲರಿಗೂ ಭಾಸವಾಯಿತು.

ಮುಂದಿನ ಹಂತದಲ್ಲಿ ಸಮನ್ವಯಕಾರರಾದ ಡಾ.ಸಂಜೀವ ಕುಲಕರ್ಣಿ ಅವರು ರಾಜ್ಯಭಾಷೆ ಶಿಕ್ಷಣ ಮಾಧ್ಯಮವಾಗುವುದರ ಬಗೆಗೆ ಅಂಶಗಳನ್ನು ಸ್ಪಷ್ಟಪಡಿಸಿದರು. ಭಾಷೆಯಾಗಿ ಇಂಗ್ಲೀಷ ಕಲಿಯುವ ಬಗೆಗೆ ಎರಡು ಮಾತಿಲ್ಲ ಆದರೆ ಶಾಲಾ ಶಿಕ್ಷಣದ ಮಾಧ್ಯಮವಾಗಿ ಇಂಗ್ಲಿಷ್ ನಮಗೇನನ್ನೂ ಕಟ್ಟಿ ಕೊಡುವುದಿಲ್ಲ. ಭಾಷೆಯಾಗಿ ಇಂಗ್ಲಿಷ್ ಮತ್ತು ಕಲಿಕಾ ಮಾಧ್ಯಮವಾಗಿ ಇಂಗ್ಲಿಷ್ ಎರಡೂ ಬೇರೇ ಬೇರೇ ಅಂಶಗಳೇ ಆಗಿವೆ ಎಂದರು. ಅದು ಕೇವಲ ಕಲಿಕಾ ಮಾಧ್ಯಮವಲ್ಲ. ಅದೊಂದು ಸಂಸ್ಕೃತಿಯ ಭಂಡಾರ. ಅದು ಮಗುವಿಗೆ ಇಡೀ ಜೀವನವನ್ನೇ ನೀಡುತ್ತದೆ. ಮಾನವ ಸಂಬಧಗಳ ಬಗೆಗೆ ಎಚ್ಚರಿಸುತ್ತದೆ. ಅಧ್ಯಕ್ಷೀಯ ಮಾತುಗಳನ್ನಾಡಿದ ಪ್ರೊ.ಮಾಲತಿ ಪಟ್ಟಣಶೆಟ್ಟಿ ಅವರು ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆಯ ತರಬೇತಿಯನ್ನು ನೀಡುವುದು ಅವಶ್ಯ. ಶಿಕ್ಷಣ ಸಂಸ್ಥೆಗಳು ಈ ದಿಶೆಯಲ್ಲಿ ಹೆಚ್ಚು ಪ್ರಯತ್ನ ಮಾಡಬೇಕು ಸದ್ಯದ 6

ವಿಷಯದ ಬಗೆಗೆ ವಿರೋಧವಾಗಿ ಮಾತನಾಡುವವರು ಆ ಭಾವಕ್ಕೆ ಸಂಪೂರ್ಣವಾಗಿ ಅಂಟಿಕೊಂಡಿರಬೇಕು ಎಂದರು. ಅದನ್ನೇ ನೂರಕ್ಕೆ ನೂರು ಪ್ರತಿಪಾದಿಸಬೇಕು ಎಂದರು. ವಿಷಯದ ಬಗೆಗೆ ಗಮನ ಕೊಡದಿದ್ದ ವಿಷಯಾಂತರವಾಗದ ಸಾಧ್ಯತೆಯೇ ಹೆಚ್ಚು ಎಂದರು.

ಒಟ್ಟಿನಲ್ಲಿ ಕಾರ್ಯಕ್ರಮ ಅತ್ಯಂತ ಯಶಸ್ವಿ ಆಯಿತು. ಬಾಲಬಳಗಕ್ಕೊಂದು ಹೊಸ ಪ್ರಯತ್ನವೂ ಆಯಿತು. ಮಕ್ಕಳಿಂದ ತಮಗೆ ಚರ್ಚಾಸ್ಪರ್ಧೆಯನ್ನು ಶಾಲೆ ಆಯೋಜಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

## ಶಾಲೆಯ ವರದಿ

ಗಣಿತ ಒಂದು ಅದ್ಭುತ ವಿಜ್ಞಾನ. ಇದನ್ನು, ಎಲ್ಲ ವಿಜ್ಞಾನಗಳ ತಾಯಿ ಎಂದೇ ಪರಿಗಣಿಸಲಾಗಿದೆ. ಈಗ, ಹಲವು ಸಂಶೋಧನೆಗಳಿಗೆ, ಗಣಿತವಿಲ್ಲದೆ ವ್ಯಾಖ್ಯಾನ ಅಸಾಧ್ಯ. ಇದನ್ನು ಓದುವಾಗ "ಏನ್ ಗಣಿತನೋ ಏನೋ? ಯಾರಿಗದ್ರು ಇದ್ರ ಮೇಲ್ ಹೇಗ್ ಪ್ರೀತಿ ಬರತ್ತೋ? ನಾ ಕಾಣೆ" ಎಂದು ಹಲವರು ಮನಸ್ಸಿನಲ್ಲಿ ಅಂದುಕೊಂಡಿರಬಹುದು. ಗಣಿತವನ್ನು 'ಕಬ್ಬಿಣದ ಕಡಲೆ' ಎಂದು ಕೂಡ ಹೇಳಲಾಗುತ್ತದೆ. ಇದೇ ವಿಷಯದಲ್ಲಿ ಅನೇಕ ವಿದ್ಯಾರ್ಥಿಗಳು S.S.L.C , P.U.C ಹಾಗೂ ವಿವಿಧ ಶ್ರೇಣಿಯ ಪರೀಕ್ಷೆಗಳಲ್ಲಿ ಕಡಿಮೆ ಅಂಕ ಗಳಿಸುತ್ತಿದ್ದಾರೆ. ಈ ವಿಷಾದಕರ ಸಂಗತಿಯನ್ನು ಕುರಿತು ಆಲೋಚಿಸಿದಾಗ, ಸಂಜೀವಮಾಮಾ ಅವರ ಅರಿವಿಗೆ ಬಂದ ಕಾರಣ, ಮಕ್ಕಳಿಗೆ ಸಿಗದ ಗಣಿತದ ಭದ್ರ ಅಡಿಪಾಯ.

ಈ ಅಡಿಪಾಯವನ್ನು ಸರಿಪಡಿಸಲು ಬಾಲಬಳಗದಲ್ಲಿ 2012-13 ಮತ್ತು 2013-14 ನೇ ಶೈಕ್ಷಣಿಕ ಸಾಲಿನಲ್ಲಿ 'ಆಟದೊಂದಿಗೆ ಗಣಿತ' ಎಂಬ ವಿಷಯವನ್ನು ೧ ರಿಂದ ೪ ನೇ ತರಗತಿಯ ಮಕ್ಕಳಿಗಾಗಿ ಪ್ರಾರಂಭಿಸಿದರು. ಈ ಕೆಲಸದಲ್ಲಿ ಇಂಡಿಕೇರ್ ಸಂಸ್ಥೆಯ ಕವಿತಾ ಪಾಡಿಯಾ ಅವರು ಕೈಜೋಡಿಸಿದರು. ಇದರ ಮುಖ್ಯ ಉದ್ದೇಶ ೧ ರಿಂದ ೪ ನೇ ತರಗತಿಯ ಮಕ್ಕಳಿಗೆ ಗಣಿತದ ಪರಿಕಲ್ಪನೆಗಳ ಅಡಿಪಾಯ ಆಟದ ಮುಖಾಂತರ ಮಾಡಿ, ಅವರಿಗೆ ಗಣಿತದ ಬಗ್ಗೆ ಭಯ ಹುಟ್ಟದಂತೆ ಮಾಡುವುದು.ಗಣಿತದ ಪರಿಕಲ್ಪನೆಗಳನ್ನು ಮೊದಲು ಹೇಳದೇ, ಆಟವಾದಿಸುತ್ತಾ ತಿಳಿಸಬಹುದು.

**ಹೀಗೂ ಆಡಬಹುದೇ??!**

ಆಟದೊಂದಿಗೆ ಗಣಿತ ಎಂದರೆ ನೆನಪಾಗುವುದು, ಚನ್ನಮಣೆ, ಚೌಕಾಬಾರ... ಅದೆಷ್ಟು ಲೆಕ್ಕಾಚಾರ ಮಾಡಿ ಆಡುತ್ತಿದ್ದೆವು! ಆಟದ ಮಧ್ಯೆ ಕೂಡಿದ್ದು, ಕಳೆದಿದ್ದು ಅರಿವಿಗೇ ಬರಲಿಲ್ಲ! ಈಗಿನ ಮಕ್ಕಳಿಗೆ ಆ  ಆಟಗಳೇ ಇಲ್ಲ. ಹಾಗಾಗಿ, ಬಾಲಬಳಗದಲ್ಲಿ ಮಕ್ಕಳು ಸಹಜವಾಗಿ ಆಡುವ ಕೆಲವು ಆಟಗಳಿಗೆ ಗಣಿತದ ಪರಿಕಲ್ಪನೆಗಳನ್ನು ಪೋಣಿಸಲಾಗಿದೆ.



**ಜಿಗಿಯಲೋ? ಎಣಿಸಲೋ?**

ಮಕ್ಕಳು ಹಗ್ಗದಾಟವಾಡುತ್ತಾ, ಜಿಗಿದಾಗ ಎಣಿಸುತ್ತಾ, ಸಂಖ್ಯೆಗಳ ಎಣಿಕೆಯನ್ನು ಕರಗತ ಮಾಡಿಕೊಳ್ಳುತ್ತಾರೆ.





**ಕೂಡುತ್ತಾ... ಕಳೆಯುತ್ತಾ...**

ಇದು, ನಮ್ಮ ಚಿರಪರಿಚಿತ ಹಾವು-ಏಣಿ ಆಟ. ಆಟವನ್ನು ಸೊನ್ನೆ ಇಂದ ಪ್ರಾರಂಭ ಮಾಡಿದರೆ ದಾಳದಿಂದ ಬಿದ್ದ ಸಂಖ್ಯೆಯನ್ನು ಕೂಡುತ್ತಾ ಹೋಗುವುದು. ೧೦೦ ರಿಂದ ಶುರು ಮಾಡಿದರೆ ದಾಳದ ಸಂಖ್ಯೆಯನ್ನು ಕಳೆಯುತ್ತಾ ಹೋಗುವುದು. ಹಾವು-ಏಣಿಗಳ ನಡುವೆ ಗಣಿತ ಸುಳಿದಿದ್ದೇ ಅರಿವಿಗೆ ಬರುವುದಿಲ್ಲ!

**ಭಾಗಿಸಿ ನೋಡಿ!**

ಈ ಆಟದಲ್ಲಿ ಕೆಲವು ನಾಣ್ಯಗಳನ್ನು ನಿರ್ದಿಷ್ಟ ಸಂಖ್ಯೆಯ ಗುಂಪುಗಳನ್ನಾಗಿ ಮಾಡುವುದು. ಉದಾಹರಣೆಗೆ, ೧೩ ನಾಣ್ಯ ಕೊಟ್ಟು ೨ ನಾಣ್ಯಗಳ ಗುಂಪು ಮಾಡಲು ಹೇಳುವುದು. ೬ ಸಂಪೂರ್ಣ ಗುಂಪುಗಳಾಗಿ ೧ ನಾಣ್ಯ ಉಳಿದಾಗ, ೧೩ರನ್ನು ೨ ರಿಂದ ಭಾಗಿಸಿದಾಗ ೧ ಶೇಷ ಮತ್ತು ೬ ಭಾಗಲಬ್ಧ ಎಂಬುದು ಅರ್ಥವಾಗುತ್ತದೆ.



### ಆಕೃತಿಗಳ ಪರಿವಾರ

ತ್ರಿಕೋನ, ವೃತ್ತ, ಚೌಕ ಮತ್ತು ವಿವಿಧ ಸರಳ ಆಕೃತಿಗಳನ್ನು ಬಳಸಿ ಮನೆ, ಮರ, ಕಾರು, ಹೀಗೆ ಸೃಜನಶೀಲ ಆಕೃತಿಗಳನ್ನು ಮಾಡುತ್ತಾ ಸರಳ ಆಕೃತಿಗಳೊಡನೆ ಸ್ನೇಹ ಬೆಳೆಸಬಹುದು.



### ಈ ಸಂಖ್ಯೆ ಗೊತ್ತೇ?

ಸಂಖ್ಯೆಗಳ ರಾಶಿಯಿಂದ ಹೇಳಿದ ಸಂಖ್ಯೆಗಳನ್ನು ಹೆಕ್ಕಿ ತೆಗೆಯುವುದೇ ಈ ಆಟದ ಉದ್ದೇಶ. ಇದರಿಂದ ಸಂಖ್ಯೆಗಳ ಉಚ್ಚಾರಣೆಗೂ, ಲಿಖಿತ ಸಂಖ್ಯೆಗಳಿಗೂ ಸಂಬಂಧ ಕಲ್ಪಿಸುವುದು ಸುಲಭವಾಗುತ್ತದೆ.



### ನದಿ ದಾಟಿ!

ಸಮ ಎಂದಾಗ ಸಮ ಸಂಖ್ಯೆಗೆ ಜಿಗಿದು, ಬೆಸ ಎಂದಾಗ ತಪ್ಪದೇ ಹತ್ತಿರದ ಬೆಸ ಸಂಖ್ಯೆಗೆ ಜಿಗಿಯುವುದು.
ಈ ಆಟವಾಡುತ್ತಾ ಸಮ-ಬೆಸ ಸಂಖ್ಯೆಗಳ ಪರಿಚಯವಾಗುತ್ತದೆ.



### ಸಮಾನತೆ ಇರಲಿ

ವಿವಿಧ ಚೌಕಗಳಲ್ಲಿ ಬೇರೆ ಬೇರೆ ಸಂಖ್ಯೆಯಲ್ಲಿ ಗೋಲಿಗಳನ್ನು ಇರಿಸಿ, ಎಲ್ಲ ಚೌಕಗಳಿಗೆ ಗೋಲಿಗಳನ್ನು ಸಮವಾಗಿ ಹಂಚಲು ಹೇಳುವುದು. ಈ ಚಟುವಟಿಕೆಯಿಂದ, ಯಾವ ಚೌಕದಿಂದ ಎಷ್ಟು ಕಳೆಯಬೇಕು, ಯಾವ ಚೌಕಕ್ಕೆ ಎಷ್ಟು ಕೂಡಬೇಕು ಎನ್ನುವುದರ ಮೂಲಕ ಕೂಡು-ಕಳೆಯುವ ಪರಿಕಲ್ಪನೆ ಸ್ಪಷ್ಟವಾಗುತ್ತದೆ.

ಎರಡು ವರ್ಷಗಳಲ್ಲಿ ೪೦% ರಷ್ಟು ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಪಾಲಕರಿಗೂ ಈ ಚಟುವಟಿಕೆಗಳನ್ನು ಮನೆಯಲ್ಲೂ ಅಳವಡಿಸಲು ಹೇಳಲಾಗಿದೆ. ನಂತರ, ಹಿಂದುಳಿದ ಮಕ್ಕಳಿಗೆ ಮೇ ರಜೆಯಲ್ಲಿ ಈ ವಿಷಯದ ಕುರಿತು ನಡೆಸಿದ ಕಾರ್ಯಾಗಾರದಿಂದ ಮಕ್ಕಳಿಗೆ ಆತ್ಮವಿಶ್ವಾಸ ಮೂಡಿದೆ. ಈಗ, ಈ ವಿಷಯದಲ್ಲಿ ೮೦% ರಷ್ಟು ಚಟುವಟಿಕೆಗಳನ್ನು ಅಳವಡಿಸಲಾಗಿದೆ. ೨೦೧೪-೧೫ ನೇ ಶೈಕ್ಷಣಿಕ ವರ್ಷದಲ್ಲಿ, ಈ ಚಟುವಟಿಕೆಗಳನ್ನು ಅರೋಬಿಂದೊ ಶಾಲೆ, ಸಿದ್ದರಾಮೇಶ್ವರ ಶಾಲೆ ಮತ್ತು ಶ್ರೀರಮನಗರ ಸರ್ಕಾರಿ ಶಾಲೆಗಳಲ್ಲೂ ಅಳವಡಿಸಲಾಯಿತು. ಈ ಕಾರ್ಯಕ್ಕೆ ದೇಶಪಾಂಡೆ ಫೌಂಡೇಶನ್ ರವರು ನೀಡಿದ ಆರ್ಥಿಕ ಸಹಾಯ ಮತ್ತು ಇಬ್ಬರು ಕೋಆರ್ಡಿನೇಟರ್ ಗಳ ಸಹಾಯದಿಂದ ಬೇರೆ ಶಾಲೆ ಮಕ್ಕಳಿಗೂ ಆಟದೊಂದಿಗೆ ಗಣಿತದ ಲಾಭ ಸಿಗುತ್ತಿದೆ.

ಹೀಗೆ, ಮಕ್ಕಳು ವಿವಿಧ ಆಟಗಳನ್ನು ಮೌಶಿ-ಮಾಮಾರ ಜೊತೆ ಆಡುತ್ತಾ ನಲಿಯುತ್ತಾ ಗಣಿತ ಕಲಿಯುತಿದ್ದಾರೆ. ಈಗ ನೀವೇ ಹೇಳಿ, ಗಣಿತ, ಆಟವೋ ಪಾಠವೋ?

ತೇಜು ಮೌಶಿ
ಶಿಕ್ಷಕಿ





**ಶ್ರೀಗಂಧ**
ಕನ್ನಡವೆಂದರೆ ಆನಂದ
ನುಡಿದರೆ ಕನ್ನಡ ಬಲುಚೆಂದ
ಕುಣಿವೆನು ನಾಡಿನ ಈ ಕಂದ
ಪರಿಮಳ ತುಂಬಿದ ಶ್ರೀಗಂಧ.

**ನಲಿ**
ಜಗವ ನೋಡಿ
ಕಲಿಯಬೇಕು
ಮಗುವ ನೋಡಿ
ನಲಿಯಬೇಕು

**ಮಕ್ಕಳು**
ಮಾತು ಕೇಳುವ ಮಕ್ಕಳು
ಬಳ್ಳಿಗೆ ಅರಳಿದ ಹೂಗಳು
ಮಾತು ಕೇಳದ ಮಕ್ಕಳು
ಕಮ್ಮಾರನ ಇಕ್ಕಳು .

ಮೇಘಾ ಗಲಗಲಿ
೭ ತರಗತಿ


## ನಮ್ಮ ಶಾಲೆ
ನಮ್ಮ ಶಾಲೆ ಸುಂದರ
ಸಂಸ್ಕೃತಿಗಳ ಆಕರ
ಗಿಡಮರಗಳ ಸಾಗರ
ಜ್ಞಾನ ವಿದ್ಯೆಯ ಮಂದಿರ !!

ನಮ್ಮ ಶಾಲೆಯಲ್ಲಿದೆ ಬಣ್ಣದ ಚಿಟ್ಟೆ
ತಂಪಾದ ಗಾಳಿಯ ಅರಳಿಕಟ್ಟೆ
ಹಾಕುವೆವು ನಾವು ರಂಗಿನ ಬಟ್ಟೆ
ಕೆಲವೊಮ್ಮೆ ಕಾಣುವ ಪಕ್ಷಿಯ ಮೊಟ್ಟೆ !!

ಪರಿಸರ ಮಿತ್ರ ನಮ್ಮ ಶಾಲೆ
ಏನು ಹೇಳಲಿ ಇದರ ಲೀಲೆ
ಕ್ರೀಡೆಯಲ್ಲಿ ಜಯದ ಮಾಲೆ
ಪಶುಪಕ್ಷಿಗಳಿರುವ ಸುಂದರ ಶಾಲೆ.!!

## ಕನ್ನಡ ನಾಡು
ನಮ್ಮ ನಾಡು ಕನ್ನಡನಾಡು
ಪ್ರಾಣಿಪಕ್ಷಿಗಳ ದಾಂಡೇಲಿ
ಕಾಡು
ಗಂಧದ ಮರಗಳ ಸುಂದರ
ಬೀಡು
ನೋಡಲೆಷ್ಟು ಸುಂದರ
ನೋಡು.

ಗುರುರಾಜ ಹೆಗಡೆ
೭ ತರಗತಿ



# ದೀಪಾವಳಿ

ದೀಪಾವಳಿ ದೀಪಾವಳಿ
ಎಲ್ಲೆಲ್ಲೂ ದೀಪಗಳ ಆವಳಿ!
ಬಾನೆತ್ತರಕ್ಕೆ ಚಿಮ್ಮಿ ಬೆಳಕಿನ
ಬುಗ್ಗೆಗಳನ್ನೆಬ್ಬಿಸುವ ಪಟಾಕಿಗಳ ಹಾವಳಿ !!

ದೀಪಾವಳಿಯು ಬೆಳಕಿನ ಹಬ್ಬ. ಕತ್ತಲೆಯಿಂದ ಬೆಳಕಿನೆಡೆಗೆ ಬರುವ ಸಂಭ್ರಮದ ಹಬ್ಬ. ಇದು ನಾಲ್ಕು ದಿನಗಳ ಹಬ್ಬ. ಮೊದಲನೆಯ ದಿನವನ್ನು ನೀರು ತುಂಬುವ ಹಬ್ಬವೆಂದು ಆಚರಿಸುವರು. ಮರುದಿನ ನರಕ ಚತುರ್ದಶಿಯನ್ನು ಆಚರಿಸುವರು . ಆ ದಿನ ಶ್ರೀ ಕೃಷ್ಣ ನರಕಾಸುರನನ್ನು ಸಂಹರಿಸಿದ ದಿನವೆಂದು ಹೇಳಲಾಗುತ್ತದೆ. ಅಂದು ಮನೆಯಲ್ಲಿನ ಎಲ್ಲ ಸದಸ್ಯರು ಅಭ್ಯಂಜನ ಸ್ನಾನ(ಎಣ್ಣೆ ಸ್ನಾನ ) ಮಾಡುವರು. ಹೆಣ್ಣು ಮಕ್ಕಳು, ತಂದೆ- ಅಣ್ಣ ಮತ್ತು ತಮ್ಮಂದಿರಿಗೆ ಆರತಿ ಮಾಡುವರು. ನಂತರ ಬರುವುದು ದೀಪಾವಳಿಯ ಅಮವಾಸ್ಯ. ಅಂದು ವಾಹನಗಳಿಗೆ ಅಲಂಕಾರ ಮಾಡಿ ಪೂಜೆ ಸಲ್ಲಿಸುವರು. ಅಂಗಡಿಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ ಲಕ್ಷ್ಮಿ ಪೂಜೆಯನ್ನು ಮಾಡುವರು. ದೀಪಾವಳಿಯ ನಾಲ್ಕನೇಯ ದಿನ ಬಲಿ ಪಾಡ್ಯ. ಅಂದು ಲಕ್ಷ್ಮಿ ಮತ್ತು ಸರಸ್ವತಿ ದೇವಿಯ ಪೂಜೆಯನ್ನು ಮಾಡುವರು. ಆ ದಿನವನ್ನು 'ಶುಭ ದಿನ'ವೆಂದೂ ಹೇಳುತ್ತಾರೆ. ಹಳ್ಳಿಗಳಲ್ಲಿ ಶಗಣಿಯಿಂದ ಪಾಂಡವರನ್ನು ಮಾಡಿ ಪೂಜಿಸುವರು. ಈ ದಿನಗಳಲ್ಲಿ ಜನರೆಲ್ಲರೂ ಹೊಸ ಬಟ್ಟೆಗಳನ್ನು ತೊಟ್ಟು ಸಿಹಿತಿಂಡಿಗಳನ್ನು ಸವಿದು ಪಟಾಕಿಗಳನ್ನು ಹಾರಿಸುವರು. ಮನೆಯ ಅಂಗಳದಲ್ಲಿ ಆಕಾಶ ಬುಟ್ಟಿಗಳನ್ನು ಹಾಕುವರು ಮತ್ತು ಮನೆಯ ಮುಂದೆ ದೀಪಗಳನ್ನು ಹಚ್ಚುವರು. ಒಟ್ಟಾರೆ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ.

ಯಶಸ್

೬ ನೆ ತರಗತಿ

## ಪ್ರಬಂಧ

# ಪಾಲು

ಹಿಂದೆ ವಲ್ಲಭಪುರದಲ್ಲಿ ಸೌವೀರ ಮತ್ತು ಚಾರ್ವಾಕ ಎನ್ನುವ ಅವಳಿ ಮಕ್ಕಳಿದ್ದರು. ಸೌವೀರ ಜಾಣ. ಚಾರ್ವಾಕ ತುಂಬ ಮುಗ್ಧ . ಅವರು ಬೆಳೆದು ದೊಡ್ಡವರಾದರು. ಒಂದು ದಿನ ಅವರ ತಾಯಿ ತಂದೆ ತೀರಿಹೋದರು. ಅವರಿಗಿದ್ದ ಆಸ್ತಿ ಒಂದು ಹಣ್ಣಿನ ಗಿಡ, ಒಂದು ಎಕರೆ ಹೊಲ, ಒಂದು ಕೌದಿ, ಮತ್ತು ಒಂದು ಹಸು.

ಸೌವೀರ, ಚಾರ್ವಿಕನಿಗೆ " ತಮ್ಮ,ನಾವು ನಮ್ಮ ಈ ಆಸ್ತಿಯನ್ನು ಸಮನಾಗಿ ಹಂಚಿಕೊಳ್ಳೋಣ. ಹುಟ್ಟುವಾಗ ಅಣ್ಣ ತಮ್ಮಂದಿರಿದ್ದರೂ, ಬೆಳೆಯುವಾಗ ದಾಯಾದಿಗಳು ತಾನೇ? ನಾನು ಸರಿಯಾಗಿ ಆಸ್ತಿಯನ್ನು ಭಾಗ ಮಾಡುತ್ತೇನೆ. ನೀನು ಒಪ್ಪಿಕೋ" ಎಂದನು.

ಅದಕ್ಕೆ ಚಾರ್ವಾಕ "ಅಣ್ಣ, ನಾನು ನಿನ್ನ ಮಾತಿಗೆ ಎಂದಿಗೂ ಇಲ್ಲ ಎನ್ನುವುದಿಲ್ಲ, ಒಪ್ಪಿಕೊಳ್ಳುತ್ತೇನೆ." ಎಂದನು.

"ಸರಿ ಹಾಗಿದ್ದರೆ ಕೌದಿಯನ್ನು ನೀನು ಮುಂಜಾನೆ ಉಪಯೋಗಿಸು. ನಾನು ರಾತ್ರಿ ಉಪಯೋಗಿಸುತ್ತೇನೆ. ಹಸುವಿನ ಮುಂಭಾಗ ನಿನ್ನದು, ಹಿಂಭಾಗ ನನ್ನದು. ಗಿಡದ ಮೇಲು ಭಾಗ ನನ್ನದು, ಕೆಳಭಾಗ ನಿನ್ನದು ಅಂತಯೇ ಹೊಲದ ಕೆಳಭಾಗ ನಿನ್ನದು, ಮೇಲಿನ ಭಾಗ ನನ್ನದು" ಎಂದ ಸೌವೀರ.

"ಆಗಲಿ" ಎಂದು ಚಾರ್ವಾಕ ಒಪ್ಪಿಕೊಂಡ.

ಚಳಿಗಾಲ ಬಂದಿತು, ಚಾರ್ವಾಕ ಕೌದಿಯನ್ನು ಬೆಳಿಗ್ಗೆ ಹೊದ್ದುಕೊಂಡ. ಸೂರ್ಯನ ತಾಪ ಹೆಚ್ಚಾಯಿತು. ಸೆಖೆ ಹೆಚ್ಚಾದಂತೆ ಕೌದಿಯನ್ನು ಬೆಳಿಗ್ಗೆ ತೆಗೆದಿರಿಸಿದ. ಅದಲ್ಲದೇ ಆತನಿಗೆ ಬೇಕಾದಷ್ಟು ಕೆಲಸವಿದ್ದಿದ್ದರಿಂದ ಕೌದಿಯನ್ನು ಹೊತ್ತುಕೊಂಡು ಮಾಡಲಾರ. ಗಿಡದ ತಳವನ್ನು ಸ್ವಚ್ಛಪಡಿಸಿ ಪಾತಿ ಮಾಡಿ, ನೀರನ್ನು ಕಟ್ಟಿ, ಕಳೆ ತೆಗೆದು ಹೊಲಕ್ಕೆ ಗೊಬ್ಬರ ಹಾಕಿ, ಸಸಿಗಳಿಗೆ ನೀರು ಉಣಿಸಿದ. ಹಸುವನ್ನು ಸ್ನಾನಮಾಡಿಸಿ ಮೇವು ತಿನ್ನಿಸಿ ನೀರು ಕುಡಿಸಿದ. ರಾತ್ರಿಯಾಯಿತು. ಚಳಿ ಶುರುವಾಯಿತು. ಸೌವೀರ ಕೌದಿ ಹೊದ್ದುಕೊಂಡು ಮಲಗಿದ. ಚಾರ್ವಾಕ ಚಳಿಯಲ್ಲಿ ನಡಗುತ್ತಾ ಕುಳಿತ. ಹೀಗೆ ದಿನಗಳು ಸರಿದವು. ಹಣ್ಣಿನ ಗಿಡದ ತುಂಬಾ ಹಣ್ಣುಗಳಾದವು. ಸೌವೀರ ಬುಟ್ಟಿ ತುಂಬಾ ಹಣ್ಣುಗಳನ್ನು ತುಂಬಿಸಿಕೊಂಡ, ಚಾರ್ವಾಕ ನೋಡುತ್ತಾ ನಿಂತ. ಆಕಳು ತಿಂದುಂಡು ಚನ್ನಾಗಿ ಬೆಳೆಯಿತು. ಸೌವೀರ ಬಕೆಟ್ಟುಗಟ್ಟಲೆ ಹಾಲು ಕರೆದುಕೊಳ್ಳುವುದನ್ನು ಚಾರ್ವಾಕ ನಿಂತು ನೋಡುತ್ತಿದ್ದ. ಹೊಲದಲ್ಲಿ ಗೋಧಿಯ ತೆನೆ ತೂಗಾಡಿದವು. ಸೌವೀರ ಗೋಧಿಯನ್ನು ಚೀಲಕ್ಕೆ ತುಂಬಿಕೊಂಡ. ಚಾರ್ವಾಕ ಅದರ ಬೇರನ್ನು ಆಯ್ದುಕೊಂಡ. ವರ್ಷದ ಕೊನೆಯಲ್ಲಿ ಸೌವೀರ ಸಿರಿವಂತನಾದ, ಚಾರ್ವಾಕ ನಿರ್ಗತಿಕನಾದ. ಒಂದು ದಿನ ಚಾರ್ವಾಕ ತುಂಬಾ ಬೇಸರದಿಂದ ಕುಳಿತಿದ್ದಾಗ ಜಾತ್ರೆಗೆ ಬಂದ ನೆರೆಹಳ್ಳಿಯ ಹುಡುಗಿ ವಾರುಣಿ ಇವನನ್ನು ನೋಡಿ "ಚಾರ್ವಾಕ ಯಾಕೆ ಅಳುತ್ತೀಯಾ?" ಎಂದಳು. ಚಾರ್ವಾಕ ಇದ್ದ ಕಾರಣ ಹೇಳಿದ. ವಾರುಣಿ ನಕ್ಕು "ನಾನೊಂದು ಉಪಾಯ ಹೇಳುತ್ತೇನೆ. ಅದರಂತೆಯೇ ಮಾಡು. ನಿನ್ನನ್ನು ಮುಂದಿನ ಜಾತ್ರೆಯಲ್ಲಿ ಕಾಣುತ್ತೇನೆ." ಎಂದು ಉಪಾಯ ಹೇಳಿ ಮಾಯವಾದಳು.

ಚಾರ್ವಾಕ ಸಂಜೆಯ ಹೊತ್ತಿಗೆ ಕೌದಿಯನ್ನು ನೀರಿನಲ್ಲಿ ನೆನೆಸಿದ. ಸೌವೀರ ಆ ಒದ್ದೆ ಕೌದಿಯನ್ನು ಹೊದ್ದುಕೊಂಡು ಗಡಗಡನೆ ನಡಗುತ್ತ "ನೀನೇಕೆ ಕೌದಿಯನ್ನು ಒದ್ದೆಮಾಡಿದೆ?" ಎಂದು ಚಾರ್ವಾಕನ ಮೇಲೆ ಹರಿಹಾಯ್ದ.

"ಅದು ಕೊಳೆಯಾಗಿತ್ತು. ಅಲ್ಲದೆ ಮುಂಜಾನೆ ಅದು ನನ್ನದು, ನಾನು ಆ ಸಮಯದಲ್ಲಿ ಅದನ್ನು ಹೇಗಾದರೂ ಬಳಸಬಹುದು" ಎಂದು ಉತ್ತರಿಸಿದ ಚಾರ್ವಾಕ. ಹಣ್ಣಿನ ಗಿಡದ ತುಂಬಾ ಹೂವುಗಳಾಗಿದ್ದವು. ಚಾರ್ವಾಕ ಮರುದಿನ ಗರಗಸ ತಂದು ಗಿಡದ ಬುಡವನ್ನು ಕಡಿಯಲು ಸಿದ್ಧನಾದ. ಅದನ್ನು ನೋಡಿ ಸೌವೀರ ಎದೆ ಬಡಿದುಕೊಂಡು "ಅಯ್ಯೋ, ಮೂರ್ಖ ಗಿಡವನ್ನು ಕಡಿಯುತ್ತೀಯಾ? ಗಿಡ ತುಂಬಾ ಹೂವಾಗಿದೆ. ಎಷ್ಟೊಂದು ಹಣ್ಣಾಗುತ್ತದೆ." ಎಂದ.

"ಅದು ನಿಜ. ಆದರೆ ಗಿಡದ ಬುಡ ನನ್ನ ಪಾಲಿನದು. ಅದಕ್ಕೆ ನಾನೇನಾದರೂ ಮಾಡುತ್ತೇನೆ. ನೀನು ತಲೆ ಹಾಕಬೇಡ." ಎಂದ ಚಾರ್ವಾಕ.

"ಅಯ್ಯೋ, ಕಡಿಯಬೇಡಪ್ಪಾ! ಈ ಸಲ ಹಣ್ಣಿನಲ್ಲಿ ನಿನಗೆ ಅರ್ಧ ಪಾಲನ್ನು ಕೊಡುತ್ತೇನೆ." ಎಂದ ಸೌವೀರ.

ಅರ್ಧ ಪಾಲು ಬೇಡ. ಹೋದ ಸಲ ಎಲ್ಲ ಹಣ್ಣನ್ನೂ ನೀನೇ ತೆಗೆದುಕೊಂಡಿದ್ದೀಯ. ಆದ್ದರಿಂದ ಈ ಬಾರಿ ನನಗೆ ಪೂರ್ತಿ ಬೇಕು. ಮುಂದಿನ ಸಾರಿ ಅರ್ಧ ಅರ್ಧ ಮಾಡುವ." ಎಂದ ಚಾರ್ವಾಕ. ನಿರ್ವಾಹವಿಲ್ಲದೇ ಸೌವೀರ ಒಪ್ಪಿದ.

ಮರುದಿನ ಸೌವೀರ ಹಾಲು ಹಿಂಡಲು ಬಕೆಟ್ಟು ತೆಗೆದುಕೊಂಡು ಹೋದ. ಆಗ ಚಾರ್ವಾಕ ಹಸುವಿನ ಮುಖವನ್ನು ಹೊಡೆಯುವಂತೆ ನಟಿಸಿದ. ಗಾಬರಿಯಿಂದ ಹಸು ಸೌವೀರನನ್ನು ಒದ್ದು ಓಡಿಹೋಯಿತು.

"ಅಯ್ಯೋ, ಹಾಲು ಹಿಂಡುವ ಮುನ್ನವೇ ಹಸುವನ್ನು ಬಿಟ್ಟೆಯಲ್ಲೋ" ಎಂದು ಸೌವೀರ ಕೋಪಗೊಂಡ.

"ಅಣ್ಣಾ, ನಾನು ನನ್ನ ಪಾಲಿನ ಭಾಗಕ್ಕೆ ಮಾತ್ರ ಜವಾಬ್ದಾರಿ, ಹಾಲಿಗಲ್ಲ." ಎಂದ ಚಾರ್ವಾಕ.

ಮತ್ತೆ ಅವರಲ್ಲಿ ಒಪ್ಪಂದವಾಯಿತು. ಈ ವರ್ಷವಿಡೀ ಚಾರ್ವಾಕನೇ ಹಾಲು ಉಪಯೋಗಿಸುವುದು, ಮುಂದಿನ ವರ್ಷದಿಂದ ಸರಿಯಾಗಿ ಅರ್ಧ ಪಾಲು ಎಂದು ತೀರ್ಮಾನವಾಯಿತು. ಈ ವರ್ಷ ಹೊಲದಲ್ಲಿ ಚಾರ್ವಾಕ ನೆಲಗಡಲೆ ಹಾಕಿದ. ಸೌವೀರ ನೋಡುವ ನೋಡುವ ಗೋಜಿಗೇ ಹೋಗಲಿಲ್ಲ. ಬೆಳೆ ಹುಲುಸಾಗಿ ಬಂದಿತು. ಚಾರ್ವಾಕನ ಶ್ರಮದಿಂದ ಭೂಮಿಯ ಮೇಲಿನ ಹಸಿರು ಎಲೆ ಮತ್ತು ಭೂಮಿಯ ಒಳಕೆ ನೆಲಗಡಲೆ ಬಲಿಯಿತು.

ಚಾರ್ವಾಕ ನೆಲಗಡಲೆಯನ್ನು ಚೀಲದಲ್ಲಿ ತುಂಬಿದ. ಹಸಿರು ಸೊಪ್ಪು ಸೌವೀರನ ಪಾಲಾಯಿತು. ಚಾರ್ವಾಕ ಆ ವರ್ಷ ಹಾಲು, ಹಣ್ಣು ಮತ್ತು ನೆಲಗಡಲೆ ಮಾರಿ ಸಿರಿವಂತನಾದ. ಸೌವೀರ ಒಂದೇ ಸಮನೇ ಒದ್ದಾಡಿ ಹೋದ.

ಮುಂದಿನ ವರ್ಷ ಬಂದಿತು. ಸೌವೀರ ತಮ್ಮನೊಡನೆ ಸಂಧಾನಕ್ಕೆ ಬಂದ.

"ತಮ್ಮಾ, ಈ ಬಾರಿ ನಾವು ಎಲ್ಲದರಲ್ಲೂ ಸರಿ ಸಮನಾಗಿ ಹಂಚಿಕೊಳ್ಳೋಣ" ಎಂದ. ಆದರೆ ತಮ್ಮ ಅದನ್ನು ಒಪ್ಪಿಕೊಳ್ಳಲಿಲ್ಲ. ಅವನು ಈಗಾಗಲೆ ಸಂಪಾದಿಸಿದ ಹಣದಿಂದ ಬೇರೆ ಆಸ್ತಿ ಖರೀದಿಸಿದ್ದ. ಮಾತು ಕೊಟ್ಟಂತೆ ವಾರುಣಿ ಬಂದಳು. ಇವಳಿಗಿಂತ ಉತ್ತಮ ಆಸ್ತಿ, ಹಿತೈಷಿ ಯಾವುದೂ ತನಗಿಲ್ಲ ಎಂದುಕೊಂಡು ಚಾರ್ವಾಕ ಅವಳನ್ನು ಒಪ್ಪಿಸಿ ಮದುವೆಯಾದ.

(ಸಾಧಾರ)

ಉಜ್ವಲಸಿಂಗ ಭಾತ್ಖಂಡೆ

೧೧ನೇ ತರಗತಿ

ಮೊನ್ನೆ ಸಂಜೆ ನನ್ನ ಫೋನ್ ರಿಂಗಣಿಸಿದಾಗ ಅತ್ತಲಿಂದ ತಮ್ಮ ಎಂದಿನ ವಿಶಿಷ್ಟ ಶೈಲಿಯಲ್ಲಿ " ನಮಸ್ಕಾರ್, ನಾನು ಡಾ. ಸಂಜೀವ ಕುಲಕರಣಿ ಮಾತಾಡೂದು; ಚಿಗುರು ಚಿಲುಮೆಗೆ ಈ ಸಲ ನಿಮ್ಮ ಲೇಖನ ಬೇಕಲ್ಲಾ" ಎಂದಾಗ ನನ್ನಲ್ಲಿ ಒಂದು ರೀತಿಯ ದುಗುಡ!" ಮತ್ತ ಎರಡ ದಿನದಾಗ್ ಬೇಕು" ಅಂದಾಗ, ದುಗುಡ ಆತಂಕವಾಗಿ ಮಾರ್ಪಟ್ಟು,
ಏನೂ ತೋಚದೇ " ಹೂಂ ಸರ್ರ!" ಎಂದುಬಿಟ್ಟೆ.'ಗಡುವಿದ್ದರೇ ಕೆಲಸ ಸಾಧ್ಯ' ಎಂದು ಮನಸ್ಸಿನ ಮೂಲೆಯ ದನಿಯೊಂದು ಹೇಳಿದ ಸಮಾಧಾನ ಸ್ವಲ್ಪಮಟ್ಟಿಗೆ ಕೆಲಸ ಮಾಡಿತೆನ್ನಿ.
" ಬಾಲಬಳಗದ ಪಾಲಕನಾಗಿ ನನ್ನ ಅನುಭವ" ಈ ವಿಷಯದ ಬಗ್ಗೆ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಬಯಸುತ್ತೇನೆ.

ಶಿಕ್ಷಣದ ಉದ್ದೇಶ ವ್ಯಕ್ತಿತ್ವ ವಿಕಸನವೇ ಹೊರತು ಕೇವಲ ಜೀವನೋಪಾಯದ ಸಾಧನವನ್ನು ಗಳಿಸುವ ಮಾರ್ಗವಲ್ಲ ಎಂಬುದು ನನ್ನ ಧೃಡ ನಂಬಿಕೆ. ಅದು ಪರಿಣಾಮಕಾರಿಯಾಗಲು ವೈಜ್ಞಾನಿಕ ತಳಹದಿಯ ಶಿಕ್ಷಣ ಪದ್ಧತಿ ಹಾಗೂ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯೇ ಅಧ್ಯಯನ ಮಾಧ್ಯಮವಾಗಿರುವುದು ಅತ್ಯವಶ್ಯ ಎಂಬುದೂ ಅಷ್ಟೇ ಸತ್ಯ. ಮಾತೃಭಾಷೆ ಕಲಿಕೆಯ ಮಾಧ್ಯಮವಾದಾಗಲೇ ಮಕ್ಕಳ ಮನಸ್ಸು ಸಹಜವಾಗಿ ಅರಳಲು ಸಾಧ್ಯ.

ನಾನು ಮೊದಲು ಗದುಗಿನಲ್ಲಿ ನನ್ನ ಮಗಳನ್ನು ಕನ್ನಡ ಮಾಧ್ಯಮಕ್ಕೆ (ಶಿಶುವಿಹಾರ) ಸೇರಿಸಿದಾಗ ನನಗೆ ಇತರರಿಂದ ಪ್ರೋತ್ಸಾಹಕ್ಕಿಂತ ಹೆಚ್ಚು ದೊರೆತದ್ದು
ಹುಬ್ಬೇರಿದ, ಹೌಹಾರಿದ, ಕಳಕಳಿಯ ನೋಟಗಳು ಹಾಗೂ ಬುದ್ಧಿವಾದಗಳು ! ”ಜಗತ್ತು ಎತ್ತ ಹೊರಟಿದೆ, ನೀ ಎತ್ತಲೋ ಹೊರಟರೆ ಹೇಗೆ? ನಿನ್ನದು ಕೂಪಮಂಡೂಕ ಪ್ರವೃತ್ತಿ ! You have fixed ideas. ಅವಳನ್ನು ಆಂಗ್ಲ ಮಾಧ್ಯಮಕ್ಕೆ ಸೇರಿಸು. ಈಗ ಎಷ್ಟು ಕಾಂಪಿಟಿಷನ್ ಅದ ಗೊತ್ತೇನು?” ಇತ್ಯಾದಿ ಇತ್ಯಾದಿ...... ಅಲಲಲಲ ನಮ್ಮ ದೇಶದಲ್ಲೇ, ನಮ್ಮ ರಾಜ್ಯದಲ್ಲೇ ನಮ್ಮಭಾಷೆ ಯ ಬಗ್ಗೆ ಇರುವ ಪ್ರೀತಿ, ಗೌರವ ಇದು !

ಭಾಷಾಭಿಮಾನ ಹೋಗಲಿ, ತಮ್ಮದೇ ಮಗುವಿನ ಮುದ್ದು ಮನಸ್ಸನ್ನು ಪೋಷಿಸಿ ಅದನ್ನು ಹಂತ ಹಂತವಾಗಿ ಬಲಪಡಿಸುವುದು ಹೇಗೆ ಎಂಬುದರ ಬಗ್ಗೆಯಾದರೂ ಯೋಚಿಸುತ್ತಾರೆಯೇ ? ಅದೂ ಇಲ್ಲ !

ಈಗಿನ ದಿನಮಾನದಲ್ಲಿ ತಮ್ಮ ಮಗು ಅತ್ಯಂತ ದುಬಾರಿ ಶುಲ್ಕ ವಿಧಿಸುವ, ಶಿಸ್ತಿನ ಹೆಸರಿನಲ್ಲಿ ಉಸಿರುಗಟ್ಟಿಸಿಬಿಡುವ, ಹೊರೆಗಟ್ಟಲೆ ಹೋಂವರ್ಕ ವಿಧಿಸುವ ಹಾಗೂ ಕಂದನ ಬಾಯಲ್ಲಿ ಶೀಘ್ರವಾಗಿ ಇಂಗ್ಲಿಷ್ ಹೊಮ್ಮಿಸುವ ಶಾಲೆಗಳಿಗೆ ಸೇರಿಸದಿದ್ದರೆ ಅದು ಮಗುವಿಗೆ ಮಾಡುವ ಘೋರ ಅನ್ಯಾಯ ! ನಾಳೆ ಇನ್ನೊಬ್ರು ನಿಮ್ ಮಗು ಯಾಸಾಲಿಗೆ ಹೋಗ್ತದ ಅಂತ ಕೇಳಿದ್ರ ಏನ್ ಹೇಳೋದು ಅಂತ ವಿಚಾರ!
ನಾವಂತೂ ಇಂಗ್ಲಿಷ್ ಸರಿತ್ನಾಗಿ ಕಲಿಲಿಲ್ಲಾ, ಮಕ್ಕರ ಕಲೀಲಿ ಅಂತ ತಮ್ಮ ಕೀಳರಿಮೆಯ ನಿವಾರಣೆಯ ಜವಾಬ್ದಾರಿಯನ್ನು ಪುಟ್ಟ ಕಂದಮ್ಮಗಳ ಮೇಲೆ ಅತ್ಯಂತ ಕಳಕಳಿಯಿಂದ ಹೇರುವವರು ಬಹಳ ಜನ. ಆ ಮಗುವಿನ ವಯಸ್ಸೇನು, ಅದಕ್ಕ ಏನು ಬೇಕು, ಅದರ ಮನಸು ಏನ್ ಬಯಸ್ತದ- ಇದೆಲ್ಲಾ ಯಾರಿಗೆ ಬೇಕು ಯಾರಿಗೆ ಬೇಕು? ಇಂಥಾ ಉಸಿರುಗಟ್ಟಿಸುವ ವಾತಾವರಣದಲ್ಲಿ ಸಂಜೀವಿನಿಯಂತೆ ಸಿಕ್ಕಿದ್ದು ಬಾಲಬಳಗ.

ಇಲ್ಲಿರುವ ವೈಜ್ಞಾನಿಕ ಹಾಗೂ ವ್ಯವಸ್ಥಿತ ರೀತಿಯಲ್ಲಿ, ಮಗುವಿನ ಮೇಲೆ ಯಾವುದೇ ಹೊರೆ ಆಗದಂತೆ ಕಲಿಸುವ ವಿಧಾನ ನಿಜಕ್ಕೂ ಶ್ಲಾಘನೀಯ. ಓದು, ಆಟೋಟ, ಸಾಂಸ್ಕೃತಿಕ ಚಟುವಟಿಕೆಗಳ ಹದವಾದ ಮಿಶ್ರಣವನ್ನು ಕಂದಮ್ಮಗಳಿಗೆ ಅತ್ಯಂತ ರುಚಿಕಟ್ಟಾಗಿ ಉಣಬಡಿಸುವ ರೀತಿ ಯಾವ ಪಾಲಕರಿಗಾದರೂ ಸಂತಸ ತರುವದು. ಮಕ್ಕಳು ತಾವೇ ತಾವಾಗಿ ಶಾಲೆಗೆ ಇಷ್ಟಪಟ್ಟು ಓಡಿ ಹೋಗುವುದು, ರಜೆ ಬಂದರೆ ಹಳಹಳಿಸುವುದು ನಾವಂತೂ ನೋಡಿದ್ದಿಲ್ಲ ! ಅವರದೇ ಆದ ಜಗತ್ತು, ಅವರ ಮೌಶಿ ಮಾಮಾಗಳ ಕಕ್ಕುಲತೆ, ಬೋಧಕರು ಹಾಗೂ ವಿದ್ಯಾರ್ಥಿಗಳ ಮಧ್ಯೆ ಇರುವ ಪ್ರೀತಿ, ಸಹಪಾಠಿಗಳ ಸ್ನೇಹ ಎಲ್ಲವೂ ವಿಶೇಷವಾದದ್ದು. ಪ್ರಾತ್ಯಕ್ಷಿಕ ಕಲಿಕೆಗೆ ಇಲ್ಲಿ ವಿಶೇಷ ಮಹತ್ವ. ಮಕ್ಕಳಲ್ಲಿಯ ಭೀತಿ ಅಭದ್ರತೆಗಳನ್ನು ಕಿತ್ತೊಗೆದು ಅವರನ್ನು ಧೈರ್ಯವಂತರನ್ನಾಗಿ ಮಾಡುವ ಕಲಿಕಾ ವಿಧಾನಗಳು ಹಾಗೂ ಎಲ್ಲರೊಡನೆ ಸಹಜವಾಗಿ ಬೆರೆಯುವ ರೀತಿಯಲ್ಲಿ ಮಕ್ಕಳನ್ನು ತಯ್ಯಾರು ಮಾಡುವುದು ಮಗುವಿನ ಭಾವಿ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ.

ನನ್ನ ಮಗಳು ಇಲ್ಲಿ ಕಲಿಯುತ್ತಿರುವುದು ಅವಳ ಸೌಭಾಗ್ಯ.
ಇಂಥ ಸುಂದರ ಶಾಲೆಯನ್ನು ಕಟ್ಟಿ ಬೆಳೆಸಿದ ಡಾ. ಸಂಜೀವ ಕುಲಕರಣಿ ಹಾಗು ಅವರ ತಂಡದ ಎಲ್ಲಾ ಸದಸ್ಯರಿಗೂ ಒಬ್ಬ ಪಾಲಕನಾಗಿ ನಾನು ಚಿರಋಣಿ. ಇದು ಒಂದು ದೊಡ್ಡ ಶಿಕ್ಷಣ ಸಂಸ್ಥೆಯಾಗಿ ಬೆಳೆಯಲಿ, ಹಾಗೂ ದೇಶದ ಬೇರೆ ಬೇರೆ ಭಾಗಗಳಲ್ಲಿ ಇದರಿಂದ ಪ್ರೇರಣೆ ಪಡೆದು ಇದೇ ರೀತಿಯ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಲಿ ಎಂದು ಹಾರೈಸುತ್ತೇನೆ.

**ಡಾ. ರಾಜೀವ್ ಗೋರೆ**
ತನ್ಮಯಿಯ ಅಪ್ಪ
೩ನೇ ಇಯತ್ತೆ



## ನನ್ನ ಅದ್ಭುತ ಕ್ಷಣ


ನನ್ನ ಕೆಲವೇ ಕೆಲವು ಮಧುರವಾದ, ಮರೆಯಲಾಗದ ದಿನಗಳಲ್ಲಿ ೧೯/೧೦/೨೦೧೪ ರ ದಿನ ನಾನು ಮರೆಯುವುದಿಲ್ಲ . ಕಾರಣ ಇಷ್ಟೇ, ನಾನು "ಭಾವಸಾರ ವಿಜನ್ ಸಮಿತಿ"ಯಲ್ಲಿ ಸಾಮಾಜಿಕಕಾರ್ಯ ನಿರ್ವಹಿಸುತ್ತಿದ್ದೇನೆ. ಈ ಸಮಿತಿಯು ಮೊನ್ನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನನಗೆ 'ಅತ್ಯುತ್ತಮ ಮಹಿಳಾ ಕಾರ್ಯಕರ್ತೆ ' ಪ್ರಶಸ್ತಿ ನೀಡಿ ಗೌರವಿಸಿತು. ಆ ದಿನ ನನ್ನನ್ನು ವೇದಿಕೆಗೆ ಕರೆದು , ಕಿರೀಟ ಹಾಕಿ ನನ್ನ ಕೆಲಸಗಳ ಬಗ್ಗೆ ಹೇಳಿದಾಗ ನನ್ನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಇದರ ಹಿಂದಿನ ನನ್ನ ಶ್ರಮ ಅಷ್ಟೇ ದೊಡ್ಡದಾಗಿತ್ತು. ಈಗಾಗಲೇ ತಮಗೆಲ್ಲ ತಿಳಿದಿರುವಂತೆ ನಾನು ಬಾಲಬಳಗದ ಶಿಕ್ಷಕಿ. ಶಾಲೆಯ ನಂತರದ ಅವಧಿಯಲ್ಲಿ ನಾನು ಮನೆಯ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸಿ ನನ್ನ ಸಮಿತಿಯ ಕೆಲಸಕ್ಕಾಗಿಯೂ ಸಮಯ ಮೀಸಲಿಟ್ಟು ಸರಿಯಾಗಿ ನಿರ್ವಹಿಸಲು ಸಾಧ್ಯವಾಗಿದೆ. ಈ ನಡುವೆ ಮಕ್ಕಳ ಅಭ್ಯಾಸ, ಮಕ್ಕಳ ಕಾಳಜಿ ಎಲ್ಲವನ್ನೂ ನಿಭಾಯಿಸುವ ಸವಾಲೂ ನನ್ನ ಮೇಲಿತ್ತು. ಸಮಿತಿಯ ಅಧ್ಯಕ್ಷರು ೮ ಮಂದಿ ಮಹಿಳೆಯರನ್ನು ಈ ಪ್ರಶಸ್ತಿಗಾಗಿ ಆಯ್ಕೆ ಮಾಡಿದ್ದರು. ಅದರಲ್ಲಿ ನನ್ನ ಹೆಸರೂ ಒಂದು. ಪ್ರಶಸ್ತಿ ಪಡೆದ ನಾನು ಆ ಆನಂದದ ಕ್ಷಣಗಳನ್ನು ಎಂದೂ ಮರೆಯುವುದಿಲ್ಲ. ಈ ನನ್ನ ಪ್ರಯತ್ನದಲ್ಲಿ ನನ್ನ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹ ನೀಡಿದ ನನ್ನ ಪತಿ ಗಿರೀಶ, ಅತ್ತೆ ಹಾಗೂ ನನ್ನ ಮಕ್ಕಳನ್ನು ನಾನು ಸ್ಮರಿಸಲು ಇಷ್ಟಪಡುತ್ತೇನೆ. ನನ್ನ ಎಲ್ಲಾ ಕ್ರಿಯಾಶೀಲ ಚಟುವಟಿಕೆಗಳಲ್ಲಿ ಸದಾ ಪ್ರೋತ್ಸಾಹಿಸುವ ಬಾಲಬಳಗಕ್ಕೂ ನನ್ನ ಅನಂತ ಧನ್ಯವಾದಗಳು.

ರೋಹಿಣಿ ಗಿರೀಶ ಮುಧೋಳ್ಕರ

## ಬಸ್ ಸ್ಟ್ಯಾಂಡಿನ ಆ ಒಂದು ಕ್ಷಣ.

ಒಮ್ಮೆ ಗುಲ್ಬರ್ಗಾದ ಬಸ್ ಸ್ಟ್ಯಾಂಡಿನಲ್ಲಿ ಹುಬ್ಬಳ್ಳಿಯ ಬಸ್ಸಿಗಾಗಿ ಕಾಯುತ್ತಾ ಕುಳಿತಿದ್ದೆ. ನನ್ನ ಪಕ್ಕ ಒಬ್ಬ ಹೆಂಗಸು ತನ್ನ ಮಗುವಿಗೆ ಬಾರಿಹಣ್ಣನ್ನು ಕೊಟ್ಟಳು. ಆ ಮಗು ಸುಮಾರು ಮೂರು ವರ್ಷದ್ದಾಗಿರಬಹುದು. ಈ ದೃಶ್ಯವನ್ನು ಐದರಿಂದ ಆರು ವರ್ಷದ ಭಿಕ್ಷುಕ ಹುಡುಗನೊಬ್ಬನು ನೋಡುತ್ತಾ ನಿಂತಿದ್ದನು. ನನ್ನ ಗಮನ ಆ ಹುಡುಗನ ಮನಸ್ಸಿನಲ್ಲಿ ಅವನ ಯೋಚನೆ ಏನಿರಬಹುದು ಎನ್ನುವತ್ತ ಹರಿಯಿತು. ಅವನಿಗೂ ಆ ಬಾರಿಹಣ್ಣು ಬೇಕಾಗಿರಬಹುದಲ್ಲಾ! ಅವನಿಗೆ ಈ ಹಣ್ಣನ್ನು ಕಸಿದುಕೊಳ್ಳಬೇಕೆನಿಸಿದೆಯೆ? ಒಂದೆರಡು ನಿಮಿಷ ಕಳೆದ ಮೇಲೆ ಆ ಹೆಂಗಸಿನ ಬಸ್ಸು ಬಂತೆಂದು ಕಾಣಿಸುತ್ತದೆ. ಅವಳು ಭರಕ್ಕನೆ ಆ ಮಗುವನ್ನು ಎತ್ತಿಕೊಂಡು ತನ್ನ ಬಸ್ಸಿನತ್ತ ದುಡು ದುಡು ಹೆಜ್ಜೆ ಹಾಕತೊಡಗಿದಳು. ಆಗ ಆ ಮಗುವಿನ ಕೈಯಲ್ಲಿದ್ದ ಬಾರಿ ಹಣ್ಣು ಕೆಳಗೆ ಬಿತ್ತು. ಬಿದ್ದದ್ದೇ ತಡ ಆ ಭಿಕ್ಷುಕ ಹುಡುಗ ಓಡಿ ಬಂದು ಅದನ್ನು ಎತ್ತಿಕೊಳ್ಳಲು ನೋಡಿದನು. ನನ್ನ (ದೊಡ್ಡವರ) ಅತಿಯಾದ ಯೋಚನೆ (ಕೆಟ್ಟ) "ಹೊಡದ್ನಲ್ಲೆ ಚಾನ್ಸ್ ಈ ಮಗಾ."ಎಂದಿತು ಆ ಮುಗ್ಧ ಹುಡುಗ ಆ ಬಾರಿಹಣ್ಣನ್ನು ಎತ್ತಿಕೊಂಡು, ಆ ಹೆಂಗಸಿನತ್ತ ಓಡಿ ಹೋದ. ಆ ಮಗುವಿನ ಕಾಲನ್ನು ಜಗ್ಗತೊಡಗಿದ. ಆಗ ತಾಯಿ ತಿರುಗಿ ನೋಡಿದಳು. ಹುಡುಗ ಆ ಹಣ್ಣನ್ನು ವಾಪಸ್ಸು ಕೊಡಲು ಇಚ್ಛಿಸಿದ. ಅವಳು ಆ ಹುಡುಗನಿಗೆ ಆ ಹಣ್ಣನ್ನು ಅವನೇ ಇಟ್ಟುಕೊಳ್ಳುವಂತೆ ಹೇಳಿ ಬಸ್ಸಿನತ್ತ ಹೋದಳು.
ನನ್ನ ಮನಸ್ಸು ನಾಚಿತು.

ಉಷಾ ಕುಲಕರ್ಣಿ




Priyanka Patil
9th





Shamant Desai
7th


# Children's Art




ನಿಸರ್ಗದ ವಿಸ್ಮಯ, ವಿಚಿತ್ರ-ವೈಶಿಷ್ಟ್ಯಗಳನ್ನು ಭೇದಿಸುವ ತೇಜಸ್ವಿಯವರ ಸಾಹಿತ್ಯ ಭೂಗೋಳ, ಜೀವಶಾಸ್ತ್ರ, ಭೌತಶಾಸ್ತ್ರ, ಇತಿಹಾಸ, ಈ ಎಲ್ಲಾ ಶಾಸ್ತ್ರಗಳ ಸಂಪೂರ್ಣ ರಸಾಯನವಾಗಿದೆ. ಸೃಷ್ಟಿಯ ಜೀವ ಜಗತ್ತಿನ ಉಗಮದ ವೈಶಿಷ್ಟ್ಯವನ್ನು ಸ್ವಾರಸ್ಯಕರವಾಗಿ ಬಿಡಿಸಿಡುವ ಜೊತೆಜೊತೆಗೆ ಓದುಗನನ್ನು ತನ್ನದೇ ಆದ ಜಗತ್ತಿಗೆ ಕೊಂಡೊಯ್ಯುವ ವಿಶೇಷ ಸಾಮರ್ಥ್ಯ ತೇಜಸ್ವಿಯವರ ಕೃತಿಗಳಿಗಿದೆ. ನಮ್ಮೆಲ್ಲರನ್ನೀಗ ಬೇರೊಂದು ಲೋಕಕ್ಕೆ ಕೊಂಡೊಯ್ಯುತ್ತಿರುವ ತೇಜಸ್ವಿಯವರ ಪುಸ್ತಕ 'ಚಂದ್ರನ ಚೂರು'. ಭೂಮಿಯ ಏಕೈಕ ಉಪಗ್ರಹವಾದ ಚಂದ್ರನ ಕುರಿತು ಕೈಗೊಂಡಿರುವ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಬರೆದಿರುವ ಲೇಖನಗಳ ಸಂಗ್ರಹವಿದು.

ಚಂದ್ರನ ಗುರುತ್ವಾಕರ್ಷಣ ಶಕ್ತಿ ಭೂಮಿಯ 7ನೇ 1 ಭಾಗದಷ್ಟು ಮಾತ್ರ ಇರೋದರಿಂದ ಭೂಮಿಯ ಮೇಲೆ 300 ಪೌಂಡ್ ತೂಗುವ ವ್ಯಕ್ತಿಯೊಬ್ಬ ಅಲ್ಲಿ ಕೇವಲ 50 ಪೌಂಡ್ ತೂಕವಿರುತ್ತಾನೆ, ಕ್ರೀಡಾಪಟುವೊಬ್ಬ ಭೂಮಿಯ ಮೇಲೆ 6 ಅಡಿ ಹೈಜಂಪ್ ಮಾಡಿದರೆ ಅದೇ ವ್ಯಕ್ತಿ ಚಂದ್ರನಲ್ಲಿ 71 ಅಡಿ ಎತ್ತರಕ್ಕೆ ಜಿಗಿಯಬಲ್ಲನಂತೆ! ಇಲ್ಲಿ ಬೀಸುವ ಗಾಳಿಯೇ ಇಲ್ಲವಾದ್ದರಿಂದ ಇಲ್ಲಿ ಧೂಳು ಎಷ್ಟೇ ನುಣುಪಾಗಿದ್ದರೂ ಮೇಲೇಳುವುದೇ ಇಲ್ಲ, ನಮಗಿಂತ ಮುಂದುವರಿದ ನಾಗರಿಕತೆಯೊಂದು ಬೇರೊಂದು ಗ್ರಹದಲ್ಲಿ ಇದೆಯೆಂದು ಭಾವಿಸಿದರೆ, ಅದು ಎಷ್ಟು ದೂರದಲ್ಲಿರಬಹುದು? ನಮಗೆ ಅತ್ಯಂತ ಹತ್ತಿರದ 'ಪಲ್ಸಾರ್' ಸಹ 100 ಜ್ಯೋತಿ ವರ್ಷ ದೂರದಲ್ಲಿದೆ. ಅಂದರೆ ನಾವು ಇಲ್ಲಿ 'ಹಲೋ' ಅಂತ ಕೂಗಿದ್ರೆ ಅದು ಅವರಿಗೆ ತಲುಪಿ 'ಯಾರಪ್ಪಾ ಅಲ್ಲಿ?' ಎಂಬ ಪ್ರತ್ಯುತ್ತರ ಬರಬೇಕಾದರೆ ಯುಗಗಳೇ ಬೇಕಾಗುತ್ತದೆ. ಅಜ್ಜ ಕೇಳಿದ ಪ್ರಶ್ನೆಗೆ ಮರಿಮಗನಿಗೆ ಉತ್ತರ ಸಿಗುತ್ತದೆ! ಇವು 'ಚಂದ್ರನ ಚೂರಿ'ನ ಕೆಲವು ಸ್ಯಾಂಪಲ್‌ಗಳಷ್ಟೆ.


ಇಂತಹ ಹತ್ತು ರೊಟ್ಟಿಯ ಪೊಟ್ಟಣವಾದ 'ಚಂದ್ರನ ಚೂರು' ಓದುಗನಿಗೆ ಹೊಸ ರುಚಿಯ ನೀಡುತ್ತಾ, ಓದಿಸಿಕೊಂಡು ಹೋಗಬಲ್ಲದು. ಚಂದ್ರನನ್ನು ನೋಡುವ ಮನಸ್ಸಿದ್ದರೆ 63 ರೂಪಾಯಿಗಳ ಈ ಚೂರನ್ನು ಓದಿ ನೋಡಿ. ಚಂದ್ರನ ಬಗ್ಗೆ ಕುತೂಹಲ ಇರುವ ಪ್ರತಿಯೊಬ್ಬರೂ ಯಾವ ಹೊತ್ತಿನಲ್ಲಾದರೂ ಓದಬಹುದಾದ ಪುಸ್ತಕವಿದು.



Suggested Book

# Suggested Movie


Source: Common Sense Media




RATATOUILLE follows the culinary adventures of Remy (voiced by comedian Patton Oswalt), a unique rat who can't stomach eating garbage. He wants the good stuff -- truffle oil and fine artisan cheeses -- which brands him the snobby black sheep of his crew. After Remy's family is driven from their habitat by a gun-toting grandma, he emerges onto the streets of Paris, where he's visited by the ghost of renowned, recently deceased uber-chef Gusteau (Brad Garrett), who was famous for the populist saying "Anyone can cook." Remy is drawn to Gusteau's now three-star restaurant (it lost a star after Gusteau died), where he feels right at home ... before being sighted and nearly killed by flying knives. Remy, quick with the spices, saves young kitchen helper Linguini (Lou Romano) from ruining the soup of the day, and the two form an odd-couple bond. From then on, Remy becomes part Mister Miyagi, part puppeteer as he helps Linguini cook up delicious specials that put Gusteau's back on the culinary map. But as Linguini soaks in his new fame as the chef du jour, Remy grows increasingly bitter that someone else is taking credit for his recipes. The film's nemeses are Gusteau's new head chef -- an angry little dictator (Ian Holm) who wants to make millions selling a line of prepackaged frozen foods -- and Anton Ego (Peter O'Toole), a food critic who loves writing negative reviews.

Parents can discuss the film's theme with the kids:

Pretending to be something you're not. Linguini takes credit for Remy's cooking ideas to look like a chef, and Remy turns away from his rat family to be with his human friends and eat good food. How does pretending catch up to each of them?





It is a 1967 British drama film starring Sidney Poitier that deals with social and racial issues in an inner-city school. James Clavell directed and wrote the film's screenplay, based on the semi-autobiographical novel *To Sir, With Love* by E. R. Braithwaite. The movie ranked number 27 on *Entertainment Weekly's* list of the 50 Best High School Movies.

Thackeray (Poitrer) learns from the staff of North Quay that most of the students have been rejected from other schools, and their antics drove their last teacher to resign. The students live up to their reputation. Led by Bert Denham (Christian Roberts) and Pamela Dare (Judy Geeson), their antics progress from disruptive behaviour to distasteful pranks. Thackeray retains his calm manner but a turning point comes one morning when he discovers one of the female students has mischievously left a used sanitary towel burning in the classroom grate. He loses his temper, then informs them that from now on they will be treated as adults and allowed to discuss issues of their own choosing for the remainder of the term.

Thackeray wins the class over, except for Denham, who continues to bait him. he beats Denham in a boxing match, but tells him that he has genuine boxing ability and suggests that Denham teach boxing to the younger students next year. Denham expresses his admiration for Thackeray.

Thackeray wins the students respect. He refuses the job offer and continuous to work in the same school after realizing how affectionate he feels towards the children and understands he can never part from them. This is one of the must see films.

Suggested Movie




# Summerhill: A Radical Approach to Child Rearing

It is a book about the English boarding school Summerhill School by its headmaster A. S. Neill. At the time of the book's release, Neill was unknown in the United States, and not a single bookseller purchased an advance copy. *Summerhill* brought him international renown over the next decade. The book was required in over 600 American university courses. A German translation for West Germany, *The Theory and Practice of Anti-Authoritarian Education*, was released in 1969 and sold over a million copies in three years.

Summerhill is noted for its philosophy that children learn best with freedom from coercion. All lessons are optional, and pupils are free to choose what to do with their time. Neill founded Summerhill with the belief that "the function of a child is to live his own life – not the life that his anxious parents think he should live, not a life according to the purpose of an educator who thinks he knows best."

Classes are voluntary at Summerhill. Although most students attend, children choose whether to go of their own accord and without adult compulsion. Children who do not attend are regularly criticized by their peers for hindering class progress.

After Neill died in 1973 it was run by his wife, Ena, until 1985.
Today it is a boarding and day school serving primary and secondary education in a democratic fashion. It is now run by Neill's daughter, Zoë Neill Readhead.

# Something special on the occasion of Children's Day!

ನೆನಪಿನ ದೋಣಿಯಿಂದ

Himalaya Trip—2006



Something Special on the occasion of
Children's Day!



Something special on the occasion of Children's Day!






**2008**


**ಮಕ್ಕಳ ಹಬ್ಬ**

Something special on the occasion of Children's Day!




ಪ್ರವಾಸ
**2007**

Something special on the occasion of Children's Day!




??2001
Jan 26

Something special on the occasion of Children's Day!




Something special on the occasion of Children's Day!




ಮಕ್ಕಳ ಹಬ್ಬ
1999




2008

Something special on the occasion of Children's Day!

# ನಮ್ಮ ಬಳಗ


ಸಂಪದಾ


ತುಷಾರ


ದೀಪಕ


ಶರತ


ಮಿಂಚು


ಚಿನ್ಮಯೀ

ತುಷಾರ, ನೀ ಬಂದಿದ್ದಕ್ಕ ನಮಗ ಖುಷಿ ಅದ.

ನಾವ್ ಖರೆ ಅಂದ್ರು ಸುಳ್ಳ್ ಹೇಳಲಿಕತ್ತೆವಿ!

ನಮ್ಮ ಈ ಪುಟ್ಟ ಪ್ರಯತ್ನಕ್ಕೆ ನಿಮ್ಮ ಅನಿಸಿಕೆಗಳು ಮತ್ತು ಮೆಚ್ಚುಗೆಗಳ ಮೂಲಕ ಪ್ರೋತ್ಸಾಹಿಸಿ.

ನೀವು ಕೂಡ ನಮ್ಮ ಜೊತೆ ಯಾವುದಾದರೂ ರೀತಿಯಲ್ಲಿ ಕೈ ಜೋಡಿಸಬಹುದಾದಲ್ಲಿ ತುಂಬಾ ಸಂತೋಷ.

ನಮಗೆ ಮಿಂಚಂಚೆ ಬರೆಯಿರಿ.

chiguruchilume@gmail.com